

# ಕೆಲಸ
## ಮತ್ತು ಅದರ ಮೂಲ ವಿನ್ಯಾಸ

ಆಶಿಷ್ ರಾಯ್‌ಚೂರ್

**ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವುದಕ್ಕೂ ಕಾಯುವುದಕ್ಕೆ ಅದರಲ್ಲಿ ಇಟ್ಟನು**

**(ಆದಿಕಾಂಡ 2:15)**

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್**, ಬೆಂಗಳೂರು
ಪ್ರಥಮ ಪ್ರತಿ ಮುದ್ರಣ: ಫೆಬ್ರವರಿ 2022
ಕನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Biblical definitions, Hebrew and Greek words and their meanings are drawn from the following resources:

Thayer's Greek Definitions. Published in 1886, 1889; public domain.
Strong's Hebrew and Greek Dictionaries, Strong's Exhaustive Concordance by James Strong, S.T.D., LL.D. Published in 1890; public domain.
Vine's Complete Expository Dictionary of Old and New Testament Words, © 1984, 1996, Thomas Nelson, Inc., Nashville, TN.

## ಹಣಕಾಸಿನ ಪಾಲುಗಾರಿಕೆ

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನು ಆಹ್ವಾನಿಸುತ್ತೇವೆ. ದಯವಿಟ್ಟು **apcwo.org/give** ಅನ್ನು ಸಂಪರ್ಕಿಸಿ ಅಥವಾ ಈ ಪುಸ್ತಕದ ಕೊನೆಯ ಭಾಗದಲ್ಲಿರುವ ''ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ'' ಎಂಬ ಪುಟ ನೋಡಿರಿ. ವಂದನೆಗಳು!

### ಮೇಲಿಂಗ್ ಪಟ್ಟಿ

ಆಲ್ ಪೀಪಲ್ಸ್ ಸಭೆಯಿಂದ ಉಚಿತ ಪುಸ್ತಕಗಳನ್ನು ಬಿಡುಗಡೆ ಮಾಡಿದಾಗ, ಅವುಗಳನ್ನು ನಿಮ್ಮ ಗಮನಕ್ಕೆ ತರುತ್ತೇವೆ. ನೀವು **apcwo.org** ಯಲ್ಲಿ ನಮ್ಮ ಮೇಲಿಂಗ್ ಪಟ್ಟಿಗೆ ಚಂದಾದಾರರಾಗಬಹುದು.

(Kannada Book - Work-Its original Design)

# ಕೆಲಸ

## ಮತ್ತು ಅದರ ಮೂಲ ವಿನ್ಯಾಸ

**ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವುದಕ್ಕೂ ಕಾಯುವುದಕ್ಕೆ ಅದರಲ್ಲಿ ಇಟ್ಟನು**

**(ಆದಿಕಾಂಡ 2:15)**

# ಪರಿವಿಡಿ


1. ಒಂದು ಪರಿಪೂರ್ಣ ಪ್ರಪಂಚದಲ್ಲಿ ಕೆಲಸ ಮಾಡುವುದು 1

2. ಕೆಲಸದ ಸ್ಥಳ ಪತನದ ಪ್ರಭಾವ ಮತ್ತು ಶಿಲುಬೆಯ ಫಲಿತಾಂಶ 7

3. ಅಪರಿಪೂರ್ಣ ಪ್ರಪಂಚದಲ್ಲಿ ಕೆಲಸ ಮಾಡುವುದು 16

# 1

# ಒಂದು ಪರಿಪೂರ್ಣ ಪ್ರಪಂಚದಲ್ಲಿ ಕೆಲಸ ಮಾಡುವುದು

ಆದಿಕಾಂಡದ ಮೊದಲ ಮೂರು ಅಧ್ಯಾಯಗಳಲ್ಲಿ ಭೂಮಿಯ ಮೇಲೆ ದೇವರು ಸೃಷ್ಟಿಸಿದ್ದನ್ನು ಮತ್ತು ಆಜ್ಞಾಪಿಸಿದ ಸಂಗತಿಗಳನ್ನು ವ್ಯಾಖ್ಯಾನಿಸುತ್ತದೆ. ದೇವರಿಂದ ನಮಗೆ ಕೊಡಲ್ಪಟ್ಟಂತಹ ಆದೇಶ ಮಾನವಕುಲದ ಸೃಷ್ಟಿ ಮತ್ತು ವಿನ್ಯಾಸವನ್ನು ನೋಡುತ್ತೇವೆ. ''ಕೆಲಸದ'' ಸಂಬಂದದ ಕುರಿತ ಕೆಲವು ವೀಕ್ಷಣೆಗಳು ಇಲ್ಲಿವೆ.

## ನಾವು ಸೃಷ್ಟಿಶೀಲರಾಗಿರಲೂ ರಚಿಸಲ್ಪಟ್ಟಿದ್ದೇವೆ

ದೇವರ ಸ್ವರೂಪದಲ್ಲಿ ಮತ್ತು ಹೋಲಿಕೆಗೆ ಸರಿಯಾಗಿ ಸೃಷ್ಟಿಸಲ್ಪಟ್ಟಿದ್ದೇವೆ. ನಮ್ಮನ್ನು ಆತನ ಸ್ವರೂಪ ಮತ್ತು ಹೋಲಿಕೆಗೆ ಸರಿಯಾಗಿ ಸೃಷ್ಟಿಸಿದ ಉದ್ದೇಶವೇನೆಂದರೆ ಭೂಮಿಯ ಮೇಲೆ ನಮ್ಮ ಮೂಲಕವಾಗಿ ಆತನು ಯಾರು (ದೇವರು) ಎಂಬುದು ಪುನರುತ್ಪಾದನೆ ಮತ್ತು ಪ್ರತಿನಿಧಿಸಲ್ಪಡುವುದು ಬಿಡುಗಡೆಗೊಳ್ಳಬೇಕೆಂಬುದಾಗಿ ಸೃಷ್ಟಿಸಿದನು. ದೇವರ ಒಂದು ಗುಣ ಸ್ವಭಾವವೇನೆಂದರೆ ಆತನು ಸೃಷ್ಟಿಕರ್ತನಾಗಿದ್ದಾನೆ. ಆದ್ದರಿಂದ ಆತನು ಸೃಷ್ಟಿಶೀಲನಾಗಿದ್ದಾನೆ ಆದುದರಿಂದ ದೇವರು ಗುಣದ ಈ ಅಂಶವನ್ನು ವ್ಯಕ್ತಪಡಿಸಲು ಜನರು ಸೃಷ್ಟಿಸಲ್ಪಟ್ಟಿದ್ದಾರೆ ಎಂಬುದನ್ನು ನಾವು ಊಹಿಸಬಹುದು ನಾವು ಸೃಷ್ಟಿಶೀಲರಾಗಿರಲೂ ಸೃಷ್ಟಿಸಲ್ಪಟ್ಟಿದ್ದೇವೆ. ಅದಾಮ ಮತ್ತು ಹವ್ವಳು ಮತ್ತು ಮಾನವ ಜನಾಂಗವು ಫಲಕೊಡಲೂ, ವೃದ್ಧಿಯಾಗಿ ಹೆಚ್ಚಲೂ, ವಶಪಡಿಸಿಕೊಳ್ಳಲೂ ಮತ್ತು ಭೂಮಿಯ ಮೇಲೆ ದೊರೆತನಮಾಡಲೂ ಭೂಮಿಯ ಮೇಲೆ ಅವರು ನೆರವೇರಿಸುವಂತಹ ಸಂಗತಿಗಳ ಮೂಲಕವಾಗಿ ದೇವರ ಸೃಷ್ಟಿಶೀಲ, ಯೋಗ್ಯತೆಗಳನ್ನು ವ್ಯಕ್ತಪಡಿಸಬೇಕು. ಆತನ ಸೃಷ್ಟಿಯನ್ನು ಜನರು ಕಂಡುಹಿಡಿಯಬೇಕು ಮತ್ತು ಆತನ ಸೃಷ್ಟಿಯಲ್ಲಿ ಆತನು ಇಟ್ಟಂತಹ ಅದ್ಭುತಕರವಾದ ಸಂಗತಿಗಳನ್ನು ಮಾಡಬೇಕೆಂಬುದು ದೇವರ ಉದ್ದೇಶವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

## ನಾವು ಕೆಲಸ ಮಾಡಲು ರಚಿಸಲ್ಪಟ್ಟಿದ್ದೇವೆ

''ಯೆಹೋವದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ ಅದರಲ್ಲಿ ಇಟ್ಟನು'' (ಆದಿಕಾಂಡ 2:15) ದೇವರು ಅವರನ್ನು ತೋಟದ ಮಧ್ಯದಲ್ಲಿ ಇಟ್ಟನು ಮತ್ತು ಕೆಲವು ಜವಬ್ದಾರಿಗಳನ್ನು ಕೊಟ್ಟನು. ಆದಾಮನು ಉಳುಮೆ ಮತ್ತು ತೋಟದ ವ್ಯವಸಾಯ ಮಾಡಬೇಕು, ಇದರರ್ಥ ಅವನಿಗೆ ಮಾಡಲೂ ಕೆಲಸ ಇತ್ತು. ಕೆಲಸವು ದೇವರಿಂದ ಸಂಯೋಜಿಸಲ್ಪಟ್ಟಿದೆ ಮತ್ತು ಕೆಲಸವು ಒಂದು ಒಳ್ಳೆಯ ಸಂಗತಿಯಾಗಿದೆ. ಮದುವೆಯನ್ನು ಸಂಯೋಜಿಸುವುದಕ್ಕೆ ಮೊದಲೇ ಕೆಲಸವನ್ನು ದೇವರು ಪ್ರತಿಷ್ಟಾಪಿಸಿದ್ದಾನೆ.

ಮಾನವ ಜನಾಂಗಕ್ಕೆ ದೇವರು ಸ್ವಾಧೀನವಾಗಿ ಕೊಟ್ಟಂತಹದಕ್ಕೆ ದುರಾತ್ಮನು ನಿಶ್ಚಯವಾಗಿ ಅತಿಕ್ರಮಣ ಪ್ರವೇಶ ಮಾಡುತ್ತಾನೆಂಬುದಾಗಿ ತಿಳಿದು ಆದಾಮ ತೋಟವನ್ನು ಸಂರಕ್ಷಿಸಿಕೊಳ್ಳಬೇಕಾಗಿತ್ತು. ಆದಾಮನು ದೇವರಿಗೆ ಸಮರ್ಪಣೆಯಲ್ಲಿ ಅವನಲ್ಲಿರುವ ದೇವರ ಮಹಿಮೆಯೊಡನೆ (ದೇವರ ಸ್ವರೂಪ ಮತ್ತು ಹೋಲಿಕೆ) ದೇವರ ಪ್ರಸನ್ನತೆಯಲ್ಲಿ ನಡೆಯುವವರೆಗೂ ವೈರಿಯನ್ನು ಹೊರಗಡೆ ಇರಿಸಬಹುದಿತ್ತು ಮತ್ತು ಅವನಿಗೆ ಸ್ವಾಧೀನವಾಗಿ ಕೊಟ್ಟಿದ್ದನ್ನು ರಕ್ಷಿಸಿಕೊಳ್ಳಬಹುದಾಗಿತ್ತು. ಮುಂದೆ ತೋಟದಲ್ಲಿ ಆದಾಮನಿಗೆ ಕೊಡಲ್ಪಟ್ಟಂತಹವು ಆದಾಮನ ಸಂತತಿಯ ಮೂಲಕವಾಗಿ ಭೂಮಿಯ ಮೇಲೆಲ್ಲಾ ವಿಸ್ತರಿಸಬೇಕೆಂಬುದಾಗಿತ್ತು ಎಂಬುದನ್ನು ನಾವು ಊಹಿಸಿಕೊಳ್ಳಬಹುದು.

## ಕೆಲಸದ ಸ್ಥಳದಲ್ಲಿ ಸರಿಬೀಳುವ ಸಹಕಾರಿಯಾಗಿ ಹವ್ವಳು ಸೃಷ್ಟಿಸಲ್ಪಟ್ಟಳು

''ಅವನಿಗೆ ಸರಿಬೀಳುವ ಸಹಕಾರಿಯನ್ನು'' (ಆದಿಕಾಂಡ 2:18) ಈ ರೀತಿಯಾಗಿರಲೂ ಹವ್ವಳನ್ನು ದೇವರು ಸೃಷ್ಟಿಸಿದನು ಹವ್ವಳು ಆದಾಮನಿಗೆ ಸರಿಬೀಳುವ ಅವನು ಏಕಾಂಗಿಯಾಗಿರುವುದನ್ನು ಕಡಿಮೆ ಮಾಡುವ ಮತ್ತು ಅದೇ ಸಮಯದಲ್ಲಿ ಅವನೊಂದಿಗೆ ಜೊತೆ ಕೆಲಸಮಾಡುವ ಮತ್ತು ತೋಟದಲ್ಲಿ ಆತನ ಜವಬ್ದಾರಿಗಳಿಗೆ ಸಹಕಾರಿಯಾಗಿರುವವಳಾಗಿ ಸೃಷ್ಟಿಸಲ್ಪಟ್ಟಳು ದೇವರಿಂದ ತೋಟದಲ್ಲಿ ವ್ಯವಸಾಯ ಮಾಡುವ ಮತ್ತು ಸಂರಕ್ಷಣೆ ಮಾಡುವುದನ್ನು ಆದಾಮ ಪಡೆದುಕೊಂಡಂತಹ ಆದೇಶವನ್ನು ಇದು ಒಳಗೊಂಡಿತ್ತು. ಹವ್ವಳಿಗೂ ತೋಟದಲ್ಲಿ ಒಂದು ಸ್ಥಳವಿತ್ತು ಮತ್ತು ಆದಾಮನೊಂದಿಗೆ ಕಾವಲು ಕಾಯಲು ಮತ್ತು ಸಂರಕ್ಷಣೆ ಮಾಡಿ ಇಟ್ಟುಕೊಳ್ಳಲೂ ಒಂದು ಪಾತ್ರ ಹೊಂದಿದ್ದಳು ಮಾನವ ಜನಾಂಗದ ಮೇಲೆ ವಶಮಾಡಿಕೊಳ್ಳಲೂ

ಮನುಷ್ಯನ ಜೊತೆಯಲ್ಲಿರುವುದಕ್ಕಾಗಿ ಸ್ತ್ರೀಯರು ದೇವರಿಂದ ಸೃಷ್ಟಿಸಲ್ಪಟ್ಟಿದ್ದಾರೆ ಕೆಲಸದ ಸ್ಥಳದಲ್ಲಿ ಸ್ತ್ರೀಯರು ಒಂದು ಸ್ಥಾನ ಮತ್ತು ಒಂದು ಪಾತ್ರ ಹೊಂದಿದ್ದಾರೆ.

## ಒಂದು ಪರಿಪೂರ್ಣ ಪ್ರಪಂಚದಲ್ಲಿ ಕೆಲಸ ಮಾಡುವುದು

ಆದಾಮನು ಮತ್ತು ಹವ್ವಳು ಪಾಪ ಮಾಡದಿದ್ದರೆ ಮತ್ತು ದೇವರ ಮೂಲ ಯೋಜನೆಗನುಸಾರವಾಗಿ ಮಾನವ ಜನಾಂಗವು ಮುಂದುವರೆದಿದ್ದರೆ ಏನಾಗುತ್ತಿತ್ತು? ತೋಟದಲ್ಲಿ ಕೆಲಸ ಮಾಡುವುದು ಯಾವ ರೀತಿಯಲ್ಲಿರುತ್ತಿತ್ತು, ಮತ್ತು ಸಮಯವು ಕಳೆದಂತೆ ದೇವರು ಜನರಿಗಾಗಿ ಉದ್ದೇಶಿಸಿದ್ದಂತಹವುಗಳು ನಿರ್ದಿಷ್ಟವಾಗಿ ಕೆಲಸದ ಸಂಬಂಧದಲ್ಲಿ ಪ್ರವೇಶಿಸುವಂತದ್ದು ಏನಾಗುತ್ತಿತ್ತು? ಮಾನವನು ಬಿದ್ದುಹೋಗದಿದ್ದರೆ ಒಂದು ಪರಿಪೂರ್ಣ ಪ್ರಪಂಚದಲ್ಲಿ ಕೆಲಸದ ಸ್ಥಳವು ಏನಾಗಿರುತ್ತಿತ್ತು? ಸತ್ಯವೇದದ ದೃಷ್ಟಿಕೋನದಿಂದ ಕೆಲವು ವಿಕ್ಷಣೆಗಳು ಇಲ್ಲಿವೆ.

## ಕೆಲಸದ ದಿನದ ಮೂಲಕವಾಗಿ ಆರಾಧನೆಯು ಮುಂದುವರೆಯುತ್ತಿತ್ತು

ದೇವರ ಪ್ರಸನ್ನತೆಯು ನಮ್ಮನ್ನು ದಿನಪೂರ್ತಿ ಮರೆಮಾಡಿರುತ್ತಿತ್ತು. ದಿನಪೂರ್ತಿ ದೇವರೊಡನೆ ಸಂಪೂರ್ಣ ಐಕ್ಯತೆಯಲ್ಲಿರುತ್ತಿದ್ದೆವು. ಕೆಲಸ ಮತ್ತು ಆರಾಧನೆಯು ದಿನದ ಭಿನ್ನವಾದ ಗಂಟೆಗಳಿಗೆ ವಿಭಾಗೀಯ ಅಥವಾ ವಿಂಗಡನೆಯನ್ನು ಹೊಂದಿಲ್ಲದಂತೆ ಇರುತ್ತಿತ್ತು.

## ಆರಾಧನೆ ಮತ್ತು ಕೆಲಸ ಎರಡೂ ದೇವರಿಗೆ ಇರುತ್ತದೆ

ಕೆಲಸವು ಒಂದು ಸಣ್ಣಪುಟ್ಟ ಕೆಲಸವಲ್ಲ ಆದರೆ ಒಂದು ಪರಲೋಕದ ಒಂದು ನಿಯೋಜನೆ, ದೇವರಿಗೆ ಒಂದು ಸೇವೆಯಾಗಿ ಯಾಕೆಂದರೆ ಇದನ್ನು ದೇವರು ಕಡ್ಡಾಯಗೊಳಿದ್ದಾನೆ ಪ್ರತಿಯೊಬ್ಬರು ಕೆಲಸ ಮಾಡುತ್ತಾರೆ ಮತ್ತು ದೇವರಿಗಾಗಿ ಅವರ ಕೆಲಸಗಳನ್ನು ಮಾಡುತ್ತಾರೆ. ''ನಾನು ಈಗ ಲೌಕಿಕವಾದ/ಪ್ರಾಪಂಚಿಕವಾದದ್ದನ್ನು ಮಾಡುತ್ತಿದ್ದೇನೆ ಮತ್ತು ನಾನು ಮನೆಗೆ ಹೋದನಂತರ ದೇವರನ್ನು ಆರಾಧಿಸುವಂತಹ ಪವಿತ್ರವಾದದ್ದನ್ನು ಮಾಡುತ್ತೇನೆ'' ಅನ್ನುವಂತಹ ಪ್ರಜ್ಞೆ ಇಲ್ಲ.

## ದೇವರು ಕಾರ್ಯನಿರತನಾಗಿದ್ದಾನೆ.

ತೋಟದಲ್ಲಿ ದಿನವು ಯಾವ ರೀತಿ ವಿಶಿಷ್ಟವಾಗಿತ್ತು ಎಂಬುದನ್ನು ಆದಿಕಾಂಡ 3:8 ವ್ಯಾಖ್ಯಾನಿಸುವುದನ್ನು ನೋಡುವುದು ಆಸಕ್ತಿಕರವಾಗಿದೆ. ''ತರುವಾಯ

ಯೆಹೋವದೇವರು ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆ ಸ್ತ್ರೀ ಪುರುಷರು ಆತನ ಸಪ್ಪಳವನ್ನು ಕೇಳಿ...'' ಆದಾಮು ಮತ್ತು ಹವ್ವಳು ತೋಟದಲ್ಲಿ ವಾಸಿಸುತ್ತಿದ್ದ ಮತ್ತು ತೋಟದಲ್ಲಿ ವ್ಯವಸಾಯವನ್ನು ಮತ್ತು ಅದನ್ನು ಸಂರಕ್ಷಣೆ ಮಾಡುತ್ತಿದ್ದನ್ನು ಕುರಿತು ದೇವರು ಅವರನ್ನು ಸಂಧಿಸುತ್ತಿರುವಂತಹ ಒಂದು ಚಿತ್ರಣವನ್ನು ಊಹಿಸಿಕೊಳ್ಳಿರಿ, ಬಹುಶಃ ದೇವರು ಅವರನ್ನು ಭೇಟಿ ಮಾಡುತ್ತಿದ್ದನು ಮತ್ತು ಆತನ ಸೃಷ್ಟಿಯಲ್ಲಿ ಅಡಕವಾಗಿರುವ ರಹಸ್ಯಗಳನ್ನು ಅವರಿಗೆ ಬೋಧಿಸುತ್ತಿದ್ದನು. ಬಹುಶಃ ಆತನ ಸೃಷ್ಟಿಯಲ್ಲಿ ದೊರೆಯುವಂತವುಗಳನ್ನು ಹೇಗೆ ಬಳಕೆ ಮಾಡಿಕೊಳ್ಳಬೇಕು ಮತ್ತು ಕೆಲಸಗಳನ್ನು ಮಾಡಲೂ ಹೊಸ ವಿಧಾನಗಳು ಮತ್ತು ಹೊಸ ಸಂಗತಿಗಳೊಡನೆ ಮಾಡುವುದನ್ನು ಅವರಿಗೆ ತೋರಿಸಿದನು. ದೇವರು ಕಾರ್ಯನಿರತನಾಗಿರುವಾಗ, ಕೊನೆಯಿಲ್ಲದ ಸಾಧ್ಯತೆಗಳು ಮತ್ತು ಆವಿಷ್ಕಾರಗಳು, ಹೊಸ ಅನ್ವೇಷಣೆಗಳು ಜನರ ಮೂಲಕವಾಗಿ ಬಿಡುಗಡೆಗೊಳ್ಳುವ ದೇವರ ಸೃಷ್ಟಿಶೀಲ ಸಾಮರ್ಥ್ಯವಿರುತ್ತದೆ.

ಆವಿಷ್ಕಾರ ಮಾಡುವುದು ಮತ್ತು ದೇವರ ಸೃಷ್ಟಿಯಲ್ಲಿ ಕಾನೂನುಗಳನ್ನು ಬಳಸುವುದು ಅತ್ಯಾಕರ್ಷಕವಾಗಿರುತ್ತಿತ್ತು. ಪ್ರವಾದಿಯಾದ ಯೆಶಾಯನು ರೈತನಿಗೆ ಹೇಗೆ ಉಳುಮೆ ಮಾಡಬೇಕು ಮತ್ತು ಸುಗ್ಗೀಯ ಬೆಳೆಯ ಪ್ರಕ್ರಿಯೆ ಮಾಡಬೇಕೆಂಬುದನ್ನು ದೇವರು ಬೋಧಿಸಿದಂತಹ ಚಿತ್ರಣವನ್ನು ನಮಗೆ ತಿಳಿಸುತ್ತಾನೆ. ''ನನ್ನ ಧ್ವನಿಗೆ ಕಿವಿಗೊಟ್ಟು ಕೇಳಿರಿ, ನನ್ನ ಮಾತಿಗೆ ಗಮನವಿಟ್ಟು ಆಲಿಸಿರಿ ಬಿತ್ತನೆಗಾಗಿ ಉಳುವವನು ಸದಾ ಉಳುತ್ತಿರುವನೋ (ಪ್ರತಿನಿತ್ಯವೂ) ಮಣ್ಣನ್ನು ಕೆಳಮೇಲು ಮಾಡುತ್ತಾ ಕುಂಟೆಹೊಡೆಯುವನೋ? ಅಂತು ಭೂಮಿಯನ್ನು ಹಸನು ಮಾಡಿದ ಮೇಲೆ ಕರಿಯ ಜೀರಿಗೆಯನ್ನು ಚೆಲ್ಲಿ ಜೀರಿಗೆಯನ್ನು ಬಿತ್ತಿ ಗೋದಿಯನ್ನು ಸಾಲು ಸಾಲಾಗಿಯೂ ಜವೆಗೋದಿಯನ್ನು ತಕ್ಕ ಸ್ಥಳದಲ್ಲಿಯೂ ಕಡಲೆಯನ್ನು ಅಂಚಿನಲ್ಲಿಯೂ ಹಾಕುವನಲ್ಲವೆ. ಅವನ ದೇವರು ಇದನ್ನೆಲ್ಲಾ ಅವನಿಗೆ ಸರಿಯಾಗಿ ಕಲಿಸಿ ತಿದ್ದುತ್ತಾನೆ. ಆದಕಾರಣ ಅವನ ಕರಿಯ ಜೀರಿಗೆಯನ್ನು ಒಕ್ಕುವದು ಹಲಿವೆಯಿಂದಲ್ಲ, ಕೋಲಿನಿಂದಲೇ ಜೀರಿಗೆಯನ್ನು ಒಕ್ಕುವದು ಕಣದ ಗೂಡಿನಿಂದಲ್ಲ ದೊಣ್ಣೆಯಿಂದಲೇ ಗೋದಿಯ ಕಾಳನ್ನು ನುಚ್ಚು ನುಚ್ಚು ಮಾಡುವನೋ? ತನ್ನ ಕುದುರೆಗಳನ್ನು ಹೊಡೆಯುತ್ತಾ ಗುಂಡನ್ನು ಗಿರ್ರನೆ ಉರುಳಿಸುತ್ತಾ ಯಾವಾಗಲೂ ಒಕ್ಕುತ್ತಿರುವದಿಲ್ಲ. ನುಚ್ಚುನುಚ್ಚುಮಾಡನು. ಈ ವಿವೇಕವು ಸಹ ಅತಿಶಯಾಲೋಚನಾಪರನೂ ಸುಜ್ಞಾನ ಶ್ರೇಷ್ಟನೂ ಆಗಿರುವ ಸೇನಾಧಿಶ್ವರನಾದ ಯೆಹೋವನಿಂದಲೇ ಉಂಟಾಗುತ್ತವೆ (ಯೆಶಾಯ 28:23-29).

ದೇವರ ಜ್ಞಾನವು ಆತನ ಸೃಷ್ಟಿಯಲ್ಲಿ ಸಂಯೋಜಿಸಲ್ಪಟ್ಟಿದೆ ''ಆತನು ತನ್ನ ಶಕ್ತಿಯಿಂದ ಭೂಮಿಯನ್ನು ನಿರ್ಮಿಸಿ ತನ್ನ ಜ್ಞಾನದಿಂದ ಲೋಕವನ್ನು ಸ್ಥಾಪಿಸಿ ತನ್ನ ಜ್ಞಾನದಿಂದ ಲೋಕವನ್ನು ಸ್ಥಾಪಿಸಿ, ತನ್ನ ವಿವೇಕದಿಂದ ಆಕಾಶಮಂಡಲವನ್ನು ಹರಡಿದ್ದಾನೆ'' ಎಂಬುದಾಗಿ ಯೆರೆಮೀಯಾ 10:12 ಹೇಳುತ್ತದೆ. ಜ್ಞಾನೋಕ್ತಿಗಳು ಈ ಕೆಳಗಿನಂತೆ ಹೇಳುತ್ತವೆ ಮತ್ತು ಘೋಷಿಸುತ್ತವೆ ''ಯೆಹೋವನು ತನ್ನ ಸೃಷ್ಟಿಕ್ರಮದಲ್ಲಿ ಮೊದಲು ನನ್ನನ್ನು ನಿರ್ಮಿಸಿದನು ಆತನ ಪುರಾತನ ಕಾರ್ಯಗಳಲ್ಲಿ ನಾನೇ ಪ್ರಥಮ ಪ್ರಾರಂಭದಲ್ಲಿ ಭೂಮಿಯು ಹುಟ್ಟುವುದಕ್ಕಿಂತ ಮುಂಚೆ ಅನಾದಿಕಾಲದಲ್ಲಿ ಸ್ಥಾಪಿಸಲ್ಪಟ್ಟೆನು. ಜಲನಿಧಿಗಳಾಗಲಿ ನೀರುತುಂಬಿದ ಬುಗ್ಗೆಗಳಾಗಲಿ ಇಲ್ಲದಿರುವಾಗ ನಾನು ಹುಟ್ಟಿದೆನು. ಬೆಟ್ಟಗುಡ್ಡಗಳು ಬೇರೂರಿ ನಿಲ್ಲುವುದಕ್ಕೆ ಮುಂಚೆ ಆತನು ಭೂಲೋಕವನ್ನಾಗಲಿ ಬೈಲನ್ನಾಗಲಿ ಭೂಮಿಯ ಮೊದಲನೆಯ ಅಣುರೇಣನ್ನಾಗಲಿ ನಿರ್ಮಿಸದೆ ಇರುವಾಗ ನಾನು ಹುಟ್ಟಿದೆನು. ಆತನು ಸಾಗರದ ಮೇಲೆ ಚಕ್ರಾಕಾರವಾದ ಗೀಟನ್ನು ಎಳೆದು ಆಕಾಶಮಂಡಲವನ್ನು ಸ್ಥಾಪಿಸುವಾಗ ಅಲ್ಲಿದ್ದೆನು ಆತನ ಗಗನವನ್ನು ಮೇಲೆ ಸ್ಥಿರಪಡಿಸಿ ಸಾಗರದ ಸೆಲೆಗಳನ್ನು ನೆಲೆಗೊಳಿಸಿ ಪ್ರವಾಹಗಳು ತನ್ನ ಅಪ್ಪಣೆಯನ್ನು ಮೀರದ ಹಾಗೆ ಸಮುದ್ರಕ್ಕೆ ಎಲ್ಲೆಕಟ್ಟನ್ನು ನೇಮಿಸಿ ಭೂಮಿಯ ಅಸ್ತಿವಾರಗಳನ್ನು ಗೊತ್ತು ಮಾಡುವಾಗ ನಾನು ಆತನ ಹತ್ತಿರ ಶಿಲ್ಪಿಯಾಗಿದ್ದುಕೊಂಡು ಪ್ರತಿದಿನವೂ ಆನಂದಿಸುತ್ತಾ ಯಾವಾಗಲೂ ಆತನ ಮುಂದೆ ವಿನೋದಿಸುತ್ತಾ ಆತನ ಭೂಲೋಕದಲ್ಲಿ ಉಲ್ಲಾಸಿಸುತ್ತಾ ಮಾನವ ಸಂತಾನದಲ್ಲಿ ಹರ್ಷಿಸುತ್ತಾ ಇದ್ದೇನು? (ಜ್ಞಾನೋಕ್ತಿಗಳು 8:22–31) ಆದ್ದರಿಂದ ಆತನ ಸೃಷ್ಟಿಯನ್ನು ಕಂಡುಹಿಡಿಯಲು, ದೇವರ ಮನಸ್ಸಿನಲ್ಲಿ – ದೇವರ ಜ್ಞಾನದಲ್ಲಿ ಇರುವ ಪರಿಜ್ಞಾನಗಳನ್ನು ಸಂಪಾದಿಸಲು ಜನರಿಗೆ ದೇವರು ಸಹಾಯ ಮಾಡುತ್ತಾನೆ.

## ಫಲದಾಯಕತೆ, ದ್ವಿಗುಣತೆ ಮತ್ತು ಹೆಚ್ಚಳವು ಸಾಮಾನ್ಯವಾದ ಫಲಿತಾಂಶವಾಗಿರುತ್ತದೆ.

ದೇವರು ವಿನ್ಯಾಸಗೊಳಿಸಿದ್ದನ್ನು ಮಾಡುವುದಕ್ಕಾಗಿ ಮನುಷ್ಯನನ್ನು ಆತನು ಆಶೀರ್ವದಿಸಿದ್ದಾನೆ. ದೇವರ ಆಶೀರ್ವಾದವು ಫಲದಾಯಕತೆ ದ್ವಿಗುಣ ಮತ್ತು ಹೆಚ್ಚಳವನ್ನುಂಟು ಮಾಡುತ್ತದೆ. ವಸ್ತುಗಳು ಬೆಳೆಯುವುದು, ಹೆಚ್ಚಳವಾಗುವುದು, ದ್ವಿಗುಣಗೊಳ್ಳುವುದು ಮತ್ತು ಏಳಿಗೆಯಾಗುವುದನ್ನು ನೋಡುವುದು ಸಾಮಾನ್ಯವಾದುದಾಗಿರುತ್ತದೆ.

## ಕೆಲಸವು ಆನಂದಕರವಾಗಿದೆ, ಸಂತೋಷದ ಸಂಗತಿಯಾಗಿದೆ

ಒಂದು ಪರಿಪೂರ್ಣ ಪ್ರಪಂಚದಲ್ಲಿ ಕೆಲಸವು ಆನಂದಕರವಾಗಿದೆ ಮತ್ತು ಮೆಚ್ಚುವಂತದ್ದಾಗಿದೆ. ದಿನದ ಕೊನೆಯಲ್ಲಿ ವಿಷಯಗಳು ಆನಂದಕರವಾಗುವುದನ್ನು ನೋಡುತ್ತೇವೆ ಮತ್ತು ಒಟ್ಟಾಗಿ ಬರುತ್ತದೆ ಮತ್ತು ಅದರ ಕುರಿತು ಸಂತೋಷವಾಗಿರುತ್ತೇವೆ. ದಿನದ ಕೊನೆಯಲ್ಲಿ ದುಡಿಮೆಯು ನಿರುಪಯೋಗವಾಗುತ್ತದೆಂಬ ಭಾವನೆ ಅಥವಾ ಹತಾಶೆಯ ಪ್ರಜ್ಞೆಯಿರುವುದಿಲ್ಲ. ಪ್ರತಿದಿನದ ದುಡಿಮೆಯ ಒಂದು ಅರ್ಥ, ಉದ್ದೇಶ ಮತ್ತು ಸಂತೋಷ ಹೊಂದಿರುತ್ತದೆ. ಬಹುಶಃ ಮುಂದಿನ ಯುಗದಲ್ಲಿನ ವಿಚಾರಗಳ ಕುರಿತು ಯೆಶಾಯನು ಪೂರ್ವವೀಕ್ಷಣೆ ನೀಡುತ್ತಾನೆ, ಇದರ ಒಂದು ನೋಟವನ್ನು ನಮಗೆ ಕೊಡುತ್ತಾನೆ. ''ಅಲ್ಲಿನ ಜನರು ತಾವು ಕಟ್ಟಿದ ಮನೆಗಳಲ್ಲಿ ತಾವೇ ವಾಸಿಸುವರು ತಾವು ಮಾಡಿದ ತೋಟಗಳ ಫಲವನ್ನು ತಾವೇ ಅನುಭವಿಸುವರು ಒಬ್ಬನು ಕಟ್ಟಿದ ಮನೆಯಲ್ಲಿ ಬೇರೊಬ್ಬನು ವಾಸಿಸನು. ಒಬ್ಬನು ಮಾಡಿದ ತೋಟದಲ್ಲಿ ಫಲವು ಇನ್ನೊಬ್ಬನ ವಶವಾಗದು. ನನ್ನ ಜನರ ಆಯುಸ್ಸು ವೃಕ್ಷದ ಆಯುಸ್ಸಿನಂತಿರುವದು ನನ್ನ ಆಪ್ತರು ತಮ್ಮ ಕೈಕೆಲಸದ ಆದಾಯವನ್ನು ಪೂರಾ ಅನುಭವಿಸುವರು. ಅವರು ವ್ಯರ್ಥವಾಗಿ ದುಡಿಯರು, ಅವರಿಗೆ ಹುಟ್ಟುವ ಮಕ್ಕಳು ಘೋರವ್ಯಾದಿಗೆ ಗುರಿಯಾಗರು ಅವರು ಯೆಹೋವನ ಆಶೀರ್ವಾದವನ್ನು ಹೊಂದಿದವರ ಸಂತಾನವಷ್ಟೆ ಅವರ ಸಂತತಿಯವರು ಅವರೊಂದಿಗೆ ಬಹುದಿನವಿರುವರು'' (ಯೆಶಾಯ 65:21–23) ಕೆಲಸದ ಸ್ಥಳದ ವಿಪತ್ತುಗಳು, ದುರದೃಷ್ಟಗಳು, ವಜಾ ಮಾಡುವುದು ಮತ್ತು ಆರ್ಥಿಕ ಸಂಕಷ್ಟದ ಸ್ಥಿತಿಯು ಗೊತ್ತಿಲ್ಲದ್ದಾಗಿದೆ!

# 2

# ಕೆಲಸದ ಸ್ಥಳ-ಪತನದ ಪ್ರಭಾವ ಮತ್ತು ಶಿಲುಬೆಯ ಫಲಿತಾಂಶ

ಕೆಲಸದ ಸ್ಥಳದಲ್ಲಿ ಪತನವು ತನ್ನದೇ ಪರಿಣಾಮ ಹೊಂದಿದೆ ಇದರ ಫಲಿತಾಂಶವನ್ನು ದೇವರು ಘೋಷಿಸುತ್ತಾನೆ ''ಪುರುಷನಿಗೆ ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ ಫಲವನ್ನು ನೀನು ಹೆಂಡತಿಯ ಮಾತು ಕೇಳಿ ತಿಂದ ಕಾರಣ ನಿನ್ನ ನಿಮಿತ್ತ ಭೂಮಿಗೆ ಶಾಪಬಂತು ನಿನ್ನ ಜೀವಮಾನವೆಲ್ಲಾ ದುಡಿದು ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು ಆ ಭೂಮಿಯಲ್ಲಿ ಮುಳ್ಳು ಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು ಹೊಲದ ಬೆಳೆಯನ್ನು ಅನುಭವಿಸುವಿ ನೀನು ತಿರಿಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ ನೀನು ಮಣ್ಣೇ ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ ಎಂದು ಹೇಳಿದನು (ಆದಿಕಾಂಡ 3:17-19) ಕೆಲಸದ ಸ್ಥಳವು ಶಾಪಗ್ರಸ್ತವಾಯಿತು. ಫಲವನ್ನು ಅನುಭವಿಸಲು ಬೆವರು, ದುಡಿಮೆ ಮತ್ತು ಶ್ರಮವಿರುತ್ತದೆ ಮತ್ತು ಒಬ್ಬ ವ್ಯಕ್ತಿಯ ಜೀವನದುದ್ದಕ್ಕೂ ಇದು ಮುಂದುವರೆಯುತ್ತದೆ. ಕೆಲಸದ ಸ್ಥಳದಲ್ಲಿ ವಿರೋಧಿಸುವ ಅಡ್ಡಿಪಡಿಸುವ, ನೋವುಂಟು ಮಾಡುವ (ಮುಳ್ಳುಗಳು ಮತ್ತು ಮುಳ್ಳುಗಿಡಗಳು) ಸಂಗತಿಗಳು ಇರುತ್ತವೆ. ಇವುಗಳಲ್ಲಿ ಯಾವುದು ಕೆಲಸದ ಸ್ಥಳಕ್ಕಾಗಿರುವ ದೇವರ ಮೂಲ ವಿನ್ಯಾಸ ಭಾಗಗಳಲ್ಲ.

## ಶಿಲುಬೆಯು ಪತನವನ್ನು ವ್ಯತಿರಿಕ್ತವಾಗಿಸುತ್ತದೆ

ಕರ್ತನಾದ ಯೇಸುವು ಪತನದಿಂದ ಅದರ ಸಂಪೂರ್ಣತೆಯಿಂದ ನಮ್ಮನ್ನು ಸ್ವತಂತ್ರಗೊಳಿಸಲು ಬಂದನು. ಬೀಳುವಿಕೆಯಿಂದ ಮಾನವ ಜನಾಂಗದ ಮೇಲೆ ಬಂದಂತಹ ಎಲ್ಲವುಗಳನ್ನು ಕರ್ತನಾದ ಯೇಸುವು, ಆತನ ಮರಣ ಸಮಾಧಿ ಮತ್ತು ಪುನರುತ್ಥಾನದ ಮೂಲಕ ಶಿಲುಬೆಯ ಮೇಲೆ ಆತನ ವಿಮೋಚನೆಯ ಕೆಲಸದ ಮೂಲಕ

ತಲೆಕೆಳಗಾಗಿಸುವಂತೆ ಅಥವಾ ವ್ಯತಿರಿಕ್ತವಾಗುವಂತೆ ಮಾಡಿದ್ದಾನೆ. ಇದು ಕೆಲಸದ ಸ್ಥಳದಲ್ಲಿನ ಪತನದ ಪರಿಣಾಮವನ್ನು ಒಳಗೊಂಡಿದೆ. ಯೇಸುವಿನ ಮೂಲಕವಾಗಿ ದೇವರು ಉದ್ದೇಶ ಹೊಂದಿದ್ದನು ಎಂಬುದಾಗಿ ಸತ್ಯವೇದ ಬೋಧಿಸುತ್ತದೆ ''ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು (ಕೊಲೊಸ್ಸೆಯವರಿಗೆ 1:20) ಪತನ ಅಥವಾ ಬೀಳುವಿಕೆಯಿಂದ ಹಾನಿಗೊಳಗಾದ ''ಎಲ್ಲಾ ವಿಷಯಗಳು'' ಕೆಲಸದ ಸ್ಥಳವನ್ನು ಸಹ ಒಳಗೊಂಡು ಶಿಲುಬೆಯು ವಿಮೋಚಿಸುತ್ತದೆ ಮತ್ತು ಪರಿಹರಿಸುತ್ತದೆ. ನಾವು ಪತನದಿಂದ ವಿಮೋಚನೆ ಹೊಂದಿದ್ದೇವೆ. ನಮ್ಮ ವಿಮೋಚನೆಯ ಭಾಗವು ಪ್ರಸ್ತುತ – ಕಾಲದ ನಿಜಸ್ಥಿತಿ ಎಂಬುದಾಗಿ (ಗಲಾತ್ಯದವರಿಗೆ 1:4; ಎಫೆಸದವರಿಗೆ 1:7) ಮತ್ತು ನಮ್ಮ ವಿಮೋಚನೆಯು ಭಾಗವು ಇನ್ನೂ ಭವಿಷ್ಯತ್ತಿನಲ್ಲಿದೆ ಎಂದು ತಿಳಿಯುತ್ತೇವೆ ನಮ್ಮ ವಿಮೋಚನೆಯ ಸಂಪೂರ್ಣತೆಯನ್ನು ಇನ್ನು ಅನುಭವಿಸಬೇಕಾಗಿದೆ (ಎಫೆಸದವರಿಗೆ 1:14) ಸೃಷ್ಟಿಯು ದೇವರ ಪುತ್ರರು (ಮಕ್ಕಳು) ಪ್ರಕಟಿಸುವುದನ್ನು ಮತ್ತು ಪತನದ (ಬೀಳುವಿಕೆಯ) ನಿಮಿತ್ತದಿಂದ ಭ್ರಷ್ಟಾಚಾರಕ್ಕೆ ಒಳಪಡಿಸಲಾದಂತಹ ಅದನ್ನು ಬಿಡುಗಡೆಗೊಳಿಸಬೇಕೆಂಬುದಾಗಿ ಅದು ಕಾಯುತ್ತಿರುವುದನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. (ರೋಮಾಪುರದವರಿಗೆ 8:19–23)

ವಿಮೋಚನೆ ಹೊಂದಿದ ಜನರಾಗಿ, ಈ ಜೀವಿತದಲ್ಲಿ ಮುಂದಿನ ಯುಗದ ಬಲಗಳ ರುಚಿಯನ್ನು ನಾವು ನೋಡುತ್ತೇವೆ (ಇಬ್ರಿಯರಿಗೆ 6:5) ನಾವು ಇಲ್ಲಿ ಮತ್ತು ಈಗ, ನಡೆಯಬಹುದಾದ ವಿಮೋಚನೆಯ ಪ್ರಯೋಜನಗಳಿವೆ. ಉದಾಹರಣೆಗೆ ಭವಿಷ್ಯದಲ್ಲಿ ನಾವು ಪುನರುತ್ಥಾನಗೊಂಡ ಮಹಿಮೆಯುಳ್ಳ ದೇಹಧಾರಿಗಳಾಗುತ್ತೇವೆ. ಆದರೆ ಈಗ ರೋಗಗಳಿಂದ ಮತ್ತು ಅಸ್ವಸ್ಥತೆಗಳಿಂದ ನಮ್ಮ ವಿಮೋಚನೆಯ ಭಾಗವಾದ ಸ್ವಸ್ಥತೆಯನ್ನು ನಾವು ಅನುಭವಿಸಬಹುದು. ಅದೇ ರೀತಿಯಾಗಿ ಯೆಶಾಯ 165: 21–23 ರಲ್ಲಿ ಮುಂದಿನ ಯುಗದ ಕೆಲಸದ ಸ್ಥಳದ ವ್ಯಾಖ್ಯಾನಗಳನ್ನು ವಿವರಿಸುವ ಹಾಗೆಯೇ ನಮ್ಮ ಪ್ರಸ್ತುತ ದುಡಿಮೆ ದುಡಿಮೆಯ ಸ್ಥಳ ಮತ್ತು ದುಡಿಮೆಯ ಜೀವನದ ಮೇಲೆ ವಿಮೋಚನೆಯ ಲಾಭಗಳನ್ನು ಪರಿಣಾಮ ಬೀರಲೂ ಎದುರುನೋಡಬಹುದು

## ಬಿದ್ದುಹೋದ (ಪತನವಾದ) ಪ್ರಪಂಚದಲ್ಲಿ ವಿಮೋಚನೆಗೊಂಡ ಒಡಂಬಡಿಕೆಯ ಜನರು

ವಿಶ್ವಾಸಿಗಳಾಗಿ, ನಾವುಗಳು ಬಿದ್ದುಹೋಗಿರುವ ಈ ಪ್ರಪಂಚದಲ್ಲಿ ಜೀವಿಸುವವರು ಆದರೂ ದೇವರೊಂದಿಗೆ ಒಡಂಬಡಿಕೆಯಲ್ಲಿರುವ ವಿಮೋಚನೆಯ ಜನರಾಗಿದ್ದೇವೆ.

ಆದ್ದರಿಂದ ಈ ಲೋಕದಲ್ಲಿರುವ ದುಷ್ಟನನ್ನು ನಾವು ಎದುರಿಸುವುದು ಸತ್ಯಕರವಾಗಿದೆ. ಆದಾಗ್ಯೂ ಕರ್ತನ ವಿಮೋಚನೆಯುಳ್ಳವರಾಗಿ ಶಿಲುಬೆಯ ಬಲವು ಜೀವಿತಗಳಲ್ಲಿ ಕಾರ್ಯನಿರತವಾಗಿರುವಂತಹ ಹೊಸ ಒಡಂಬಡಿಕೆಯುಳ್ಳ ಜನರು ಆಗಿ ಜೀವಿಸಲು ಇಲ್ಲಿದ್ದೇವೆ. ಪ್ರತಿದಿನ ನಮ್ಮ ಕೆಲಸದ ಸ್ಥಳಕ್ಕೆ ನಾವು ಹೋಗುವಾಗ ನಮ್ಮ ಕೆಲಸದ ಜೀವನ, ನಮ್ಮ ಕೆಲಸದ ಸ್ಥಳ ಮತ್ತು ನಮ್ಮ ಕೆಲಸದ ಮೇಲೆ ಶಿಲುಬೆಯ ವಿಮೋಚನೆಯ ಬಲವು ಪರಿಣಾಮ ಬೀರಲಿ ಎಂಬುದಾಗಿ ನಾವು ನಂಬಬೇಕು. ಯಾಕೆಂದರೆ ಶಿಲುಬೆಯಿಂದ ಶಾಪಗಳು ವ್ಯತಿರಿಕ್ತವಾಗಿವೆ ಅಥವಾ ತಲೆಕೆಳಗಾಗಿವೆ. ಮತ್ತು ನಮ್ಮ ಕೆಲಸದ ಸ್ಥಳವು ಆಶೀರ್ವದಿಸಲ್ಪಟ್ಟಿದೆ. ಶಿಲುಬೆಯ ನಿಮಿತ್ತದಿಂದ ನಾವು ಮಾಡುವಂತಹ ಕೆಲಸದಲ್ಲಿ ಫಲದಾಯಕತೆ ಮತ್ತು ಸಂತೋಷವನ್ನು ನಾವು ಘೋಷಿಸುತ್ತೇವೆ. ಶಿಲುಬೆಯ ನಿಮಿತ್ತದಿಂದ ಕೆಲಸದ ಸ್ಥಳದಲ್ಲಿ ನೋವಿಗೆ ಕಾರಣವಾದ ಅಡ್ಡಿಗಳು, ಮತ್ತು ವಿರೋಧವಾಗಿರುವ ವಿಷಯಗಳು, ಮುಳ್ಳುಗಳು ಮತ್ತು ಮುಳ್ಳುಗಿಡಗಳಂತೆ ಕಠಿಣವಾಗಿರುವವುಗಳನ್ನು ನಿರಾಕರಿಸುತ್ತೇವೆ ಮತ್ತು ಬದಲಿಗೆ ದೇವರ ಉದ್ದೇಶಗಳು ಸ್ಥಾಪಿಸಲ್ಪಡುವಂತೆ ತಿಳಿಯಪಡಿಸುತ್ತೇವೆ. ಶಿಲುಬೆಯ ನಿಮಿತ್ತದಿಂದ ಕೆಲಸದ ಸ್ಥಳಕ್ಕಿರುವ ದೇವರ ಮೂಲ ವಿನ್ಯಾಸವನ್ನು ಕಂಡು ಹಿಡಿಯಬಹುದು.

ಅಬ್ರಹಾಮನ ಒಡಂಬಡಿಕೆ ಎಂಬುದಾಗಿ ನಾವು ಉಲ್ಲೇಖಿಸುವಂತಹ ಒಂದು ರಕ್ತದ ಒಡಂಬಡಿಕೆಯನ್ನು ದೇವರು ಅಬ್ರಹಾಮನೊಡನೆ ಸ್ಥಾಪಿಸಿದನು. ತರುವಾಯ ಮೋಶೆಯ ಮೂಲಕವಾಗಿ ರಕ್ತದ ಬಲಿದಾನದ ಮೇಲೆ ಆಧಾರಿತಗೊಂಡಂತಹ ಹಳೇ ಒಡಂಬಡಿಕೆ ಎಂಬುದಾಗಿ ತಿಳಿದ ಕಟ್ಟಳೆ ಅಥವಾ ಆಜ್ಞೆಯನ್ನು ದೇವರು ಸ್ಥಾಪಿಸಿದನು ಈ ಒಡಂಬಡಿಕೆಗಳು ಕಲ್ವಾರಿ ಶಿಲುಬೆಯ ಮೇಲೆ ರಕ್ತ ಸುರಿಸಿದ, ಆತನ ಸ್ವಂತ ರಕ್ತದ ಮೂಲಕವಾಗಿ ಕರ್ತನಾದ ಯೇಸುಕ್ರಿಸ್ತನಿಂದ ಸ್ಥಾಪಿಸಲ್ಪಟ್ಟ ಹೊಸ ಒಡಂಬಡಿಕೆ ಸೂಚಿಸುತ್ತವೆ. ಹೊಸದಾದ ಒಡಂಬಡಿಕೆ ಸೂಚಿಸುತ್ತವೆ. ಹೊಸದಾದ ಒಡಂಬಡಿಕೆಯು ಹಳೇ ಒಡಂಬಡಿಕೆಗಿಂತ ಅತ್ಯಂತ ಶ್ರೇಷ್ಟವಾಗಿದೆ. ''ಯೇಸು ಆಣೆಯೊಡನೆಯೇ ಯಾಜಕನಾದದರಿಂದ ಎಷ್ಟೋ ಶ್ರೇಷ್ಟವಾದ ಒಡಂಬಡಿಕೆಗೆ ಹೊಣೆಗಾರನಾದನು. (ಇಬ್ರಿಯರಿಗೆ 7:22) ''..... ಯೇಸು ಅದಕ್ಕಿಂತ ಶ್ರೇಷ್ಟವಾದ ಯಾಜಕೋದ್ಯೋಗವನ್ನು ಹೊಂದಿದವನಾಗಿದ್ದಾನೆ ಉತ್ತಮ ವಾಗ್ದಾನಗಳ ಮೇಲೆ ಸ್ಥಾಪಿತವಾದ ಉತ್ತಮವಾದ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ'' (ಇಬ್ರಿಯರಿಗೆ 8:6)

''ಕೆಲಸ'' ''ದುಡಿಮೆ'' ಸಂಪತ್ತು ಸೃಷ್ಟಿಸುವುದು'' ಹೇಗೆ ಎಂಬುದನ್ನು ನೋಡೋಣ ಮತ್ತು ಅವು ಹೇಗೆ ಅಬ್ರಹಾಮನ ಒಡಂಬಡಿಕೆ ಮತ್ತು ಹಳೇ

ಒಡಂಬಡಿಕೆಯಿಂದ ಹಾನಿಗೊಳಗಾಯಿತು ಎಂಬುದನ್ನು ನೋಡೋಣ ಇವೆರಡು ಒಡಂಬಡಿಕೆಗಳು ಕೆಲಸದ ಸ್ಥಳದ ಆಶೀರ್ವಾದಗಳಿಗಿಂತ ಉತ್ತಮವಾದವುಗಳನ್ನು ಅವುಗಳಲ್ಲಿ ಹೊಂದಿದವು ಎಂಬುದು ಸತ್ಯಕರವಾದುದಾಗಿದೆ. ಆದರೆ ಈ ಒಂದು ಅಧ್ಯಯನದಲ್ಲಿ ಕೆಲಸ, ಕೆಲಸದ ಸ್ಥಳ ಮತ್ತು ಕೆಲಸದ ಜೀವನ ಮುಂತಾದವುಗಳ ಮೇಲೆ ನಿರ್ದಿಷ್ಟವಾಗಿ ದೃಷ್ಟಿಯನ್ನಿರಿಸುತ್ತೇವೆ. ಆದಾಗ್ಯೂ ಒಡಂಬಡಿಕೆಗಳು ಇಂತಹ ಕ್ಷೇತ್ರಗಳನ್ನು ಹೇಗೆ ಬಾಧಿತಗೊಳಿಸಿವೆ ಎಂಬುದನ್ನು ಪರೀಕ್ಷಿಸಲೂ ಆಸಕ್ತಿಯುಳ್ಳವರಾಗಿದ್ದೇವೆ, ಭೂಮಿಯು ಶಾಪಗ್ರಸ್ತವಾಯಿತು ಮತ್ತು ಮನುಷ್ಯನು ದುಡಿಯಬೇಕು ಮತ್ತು ಯಾವುದೇ ಫಲ ನೋಡಲೂ ಶ್ರಮದಿಂದ ದುಡಿಯಬೇಕೆಂಬ ಸ್ಪಷ್ಟವಾದ ಉಚ್ಚಾರಣೆಯು ಪತನದ (ಬೀಳುವಿಕೆಯ) ಫಲಿತಾಂಶವಾಗಿ ಬಂದಿತು. ಅಬ್ರಾಹಾಮನ ಒಡಂಬಡಿಕೆ ಅಥವಾ ಹಳೇ ಒಡಂಬಡಿಕೆಯ ಅಡಿಯಲ್ಲಿರುವಂತವರಿಗೆ ಇಂತಹ ಕ್ಷೇತ್ರಗಳಲ್ಲಿ ದೇವರು ಆಶೀರ್ವಾದಗಳನ್ನು ತಿಳಿಯಪಡಿಸಿದ್ದಾನೆಂಬುದು ಮತ್ತು ಅವರು ಇದನ್ನು ಅನುಭವಿಸಿದರು! ಎಂಬುದು ಆಸಕ್ತಿಕರವಾಗಿದೆ. ಹಳೇ ಒಡಂಬಡಿಕೆಯು ಅತೀ ಶ್ರೇಷ್ಟವಾದುದೆಂಬುದಾಗಿ ಕೊಡಲ್ಪಟ್ಟಿರುವುದರಿಂದ ಅದೇ ರೀತಿಯಾದಂತವುಗಳನ್ನು ನಾವು ಎದುರು ನೋಡುವಂತದ್ದು ಸಾಮಾನ್ಯವಾಗಿದೆ, ಇಲ್ಲವಾದರೆ ನಮ್ಮ ಕೆಲಸದ ಜೀವಿತದ ಮೇಲೆ ಒಡಂಬಡಿಕೆಯ ಆಶೀರ್ವಾದಗಳನ್ನು ಮತ್ತು ವಿಮೋಚನೆಯ ಶ್ರೇಷ್ಟವಾದ ಲಾಭಗಳನ್ನು ಅನುಭವಿಸಬಹುದು.

ದೇವರು ಒಂದು ಆಶೀರ್ವಾದವನ್ನು ತಿಳಿಯಪಡಿಸುವಾಗ, ಆಶೀರ್ವಾದವು ಸಮಗ್ರವಾದುದು ಮತ್ತು ನಮ್ಮ ಜೀವಿತದ ಎಲ್ಲಾ ವಲಯಗಳ ಮೇಲೆ ಪರಿಣಾಮ ಬೀರುತ್ತವೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು ದೇವರು ಅಬ್ರಹಾಮನಿಗೆ ''ನಾನು ನಿನ್ನನ್ನು ಮತ್ತು ನಿನ್ನ ಸಂತತಿಯನ್ನು ಆಶೀರ್ವದಿಸುತ್ತೇನೆ'' ಎಂಬುದಾಗಿ ಹೇಳಿದನು. ಅಬ್ರಹಾಮನಿಗೆ ಮತ್ತು ಅವನ ಸಂತತಿಯವರಿಗೆ ಈ ಆಶೀರ್ವಾದದ ಒಂದು ಭಾಗವಾಗಿ ಸ್ವಸ್ಥತೆಯನ್ನು ನೀಡುತ್ತೇವೆಂದು ಆತನು ಹೇಳಲಿಲ್ಲ ಹೇಗಾದರೂ ಸುವಾರ್ತೆಗಳಲ್ಲಿ ನಾವು ನೋಡುವಾಗ 18 ವರ್ಷಗಳಿಂದ ದೆವ್ವಬಡಿದು ನಡುಬೊಗ್ಗಿದ ಸ್ತ್ರೀಯನ್ನು ಯೇಸುವು ಕಂಡಾಗ ಆಕೆಯು ಅಬ್ರಹಾಮನ ಸಂತತಿಯವಳಾಗಿದ್ದರಿಂದ ಸ್ವಸ್ಥತೆಯನ್ನು ಹೊಂದಲೂ ಅರ್ಹಳು ಎಂಬುದಾಗಿ ಘೋಷಿಸಿ ಆಕೆಯನ್ನು ಆತನು ಗುಣಪಡಿಸಿದನು ''ಹಾಗಾದರೆ ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿಹಾಕಿದ್ದವಳೂ ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಸಬ್ಬತ್ ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸಬಾರದೋ? ಎಂದು ಉತ್ತರ ಕೊಟ್ಟನು. (ಲೂಕ 13:16) ಆಕೆಯು ಸ್ವಸ್ಥತೆ ಹೊಂದಲೂ ಹಕ್ಕನ್ನು ಹೊಂದಿದ್ದಳು ಯಾಕೆಂದರೆ ದೇವರು

ಅಬ್ರಹಾಮನಿಗೆ ಅವನ ಆಶೀರ್ವಾದದಲ್ಲಿ ಸ್ವಸ್ಥತೆಯು ಒಂದಾಗಿದೆ ಎಂಬುದಾಗಿ ದೇವರು ನಿರ್ದಿಷ್ಟವಾಗಿ ಹೇಳದಿದ್ದಾಗಲೂ ಅಬ್ರಹಾಮನ ಆಶೀರ್ವಾದದ ಬಾಧ್ಯತೆಯನ್ನು ಆಕೆ ಹೊಂದಿಕೊಂಡಳು. ''ನಾನು ನಿನ್ನನ್ನು ಆಶೀರ್ವದಿಸುತ್ತೇನೆ'' ಮತ್ತು ಅಬ್ರಹಾಮನ ಸಂತತಿಯವರೊಂದಿಗೆ ಆಶೀರ್ವಾದದ ಒಡಂಬಡಿಕೆಯನ್ನು ಸ್ಥಾಪಿಸುತ್ತೇನೆ ಎಂಬುದಾಗಿ ದೇವರು ಹೇಳಿದ್ದನು ಆದುದರಿಂದ ದೇವರು ನಮ್ಮನ್ನು ಆಶೀರ್ವದಿಸುತ್ತೇನೆ ಎಂಬುದಾಗಿ ಹೇಳುವಾಗ ಆತನು ಏನಾಗಿದ್ದಾನೆಂಬುದನ್ನು ನಮ್ಮ ಜೀವಿತಕ್ಕೆ ಆತನು ಬಿಡುಗಡೆಗೊಳಿಸುತ್ತಾನೆ ಎಂಬುದು ಆತನ ಅರ್ಥವಾಗಿದೆ, ಆದ್ದರಿಂದ ಆತನು ಯಾರಾಗಿದ್ದಾನೆಂಬುದನ್ನು – ಆತನ ಒಳ್ಳೆಯತನ, ಆತನ ಕನಿಕರ, ಆತನ ಕೃಪಾಸತ್ಯತೆ, ಆತನ ಬಲ ಆತನ ಸ್ವಸ್ಥತೆ, ಆತನ ಒದಗಿಸುವಿಕೆ ಮುಂತಾದವುಗಳನ್ನು ನಾವು ಅನುಭವಿಸಬಹುದು. ಅಬ್ರಹಾಮನ ಒಡಂಬಡಿಕೆ ಮತ್ತು ಹಳೇ ಒಡಂಬಡಿಕೆಯನ್ನು ನಾವು ನೋಡುವಾಗ ಆತನ ಒಡಂಬಡಿಕೆಯ ಜನರು ತಮ್ಮ ಕೆಲಸದ ಸ್ಥಳಗಳಲ್ಲಿ ಆಶೀರ್ವಾದವನ್ನು ಅನುಭವಿಸುವಂತೆ ಕರ್ತನು ಮಾಡಿದ್ದನೆಂಬುದನ್ನು ನಾವು ನೋಡುತ್ತೇವೆ.

## ನಿಮ್ಮ ನೆಲವು ಆಶೀರ್ವದಿಸಲ್ಪಟ್ಟಿದೆ

ಅಬ್ರಹಾಮನು ಅವನ ಜೀವಿತದಲ್ಲಿ ದೇವರ ಆಶೀರ್ವಾದಗಳನ್ನು ಅನುಭವಿಸಿದನು. ಅಬ್ರಹಾಮನು ಪ್ರಾರಂಭಿಸಲೂ ಐಶ್ವರ್ಯವಂತನಾಗಿ ಕಂಡಾಗಲೂ (ಆದಿಕಾಂಡ 13:2), ದೇವರ ಆಶೀರ್ವಾದವು ಹೆಚ್ಚಳಗೊಳ್ಳುವಂತೆ ಮಾಡಿದವು ''ಅಬ್ರಹಾಮನು ಬಹುದಿನದ ವೃದ್ದನಾದನು ಯೆಹೋವನು ಅವನನ್ನು ಸಕಲ ವಿಷಯಗಳಲ್ಲಿ ಅಭಿವೃದ್ಧಿಪಡಿಸಿದ್ದನು'' (ಆದಿಕಾಂಡ 24:1), '' ಯೆಹೋವನು ನನ್ನ ದಣಿಯನ್ನು ಬಹಳವಾಗಿ ಅಭಿವೃದ್ಧಿಪಡಿಸಿ ಅವನಿಗೆ ಕುರಿದನಗಳನ್ನೂ ಬೆಳ್ಳಿ ಬಂಗಾರವನ್ನು ದಾಸದಾಸಿಯರನ್ನೂ ಒಂಟೆಗಳನ್ನೂ ಕತ್ತೆಗಳನ್ನೂ ಕೊಟ್ಟದ್ದರಿಂದ ಅವನು ಧನವಂತನಾದನು'' (ಆದಿಕಾಂಡ 24:35)

ಅಬ್ರಹಾಮನ ಮಗನಾದ ಇಸಾಕನು ಕೆಲಸ ಸ್ಥಳದಲ್ಲಿ ದೇವರ ಆಶೀರ್ವಾದವನ್ನು ಅನುಭವಿಸಿದನು ''ಇಸಾಕನು ಆ ದೇಶದಲ್ಲಿ ಬೀಜವನ್ನು ಬಿತ್ತಿ ಅದೇ ವರುಷದಲ್ಲಿ ನೂರರಷ್ಟು ಬೆಳೆಯನ್ನು ಹೊಂದಿದನು ಯೆಹೋವನು ಅವನನ್ನು ಅಭಿವೃದ್ಧಿಪಡಿಸಿದನು ಅವನ ಐಶ್ವರ್ಯವು ದಿನೇ ದಿನೇ ಹೆಚ್ಚಿದದ್ದರಿಂದ ಬಹುಧನವಂತನಾದನು (ಆದಿಕಾಂಡ 26:12,13)

ಹಳೇ ಒಡಂಬಡಿಕೆ ಅಡಿಯಲ್ಲಿ ಆತನಿಗೆ ವಿಧೇಯರಾಗಿ ನಡೆಯುವವರಿಗೆ ಕೆಳಗಿನ ಆಶೀರ್ವಾದಗಳನ್ನು ದೇವರು ಘೋಷಿಸುತ್ತಾನೆ ''ನಿಮಗೆ ಊರಲ್ಲಿಯೂ ಅಡವಿಯಲ್ಲಿಯೂ ಶುಭವುಂಟಾಗುವದು ನಿಮ್ಮ ಸಂತಾನ ವ್ಯವಸಾಯಗಳಿಗೂ ದನಕುರಿ ಮುಂತಾದ ಪಶುಗಳಿಗೂ ಶುಭವುಂಟಾಗುವದು ನಿಮ್ಮ ಪುಟ್ಟಿಗಳಿಗೂ ಕೊಣವಿಗಳಿಗೂ ಶುಭವುಂಟಾಗುವದು ನೀವು ಕೆಲಸಕ್ಕೆ ಹೋಗುವಾಗಲೂ ಬರುವಾಗಲೂ ಶುಭವುಂಟಾಗುವದು'' (ಧರ್ಮೋಪದೇಶಕಾಂಡ 28:3–6)

ಪತನವು (ಬೀಳುವಿಕೆ) ಕೆಲಸದ ಸ್ಥಳದ ಮೇಲೆ ಶಾಪವನ್ನು ತಂದಿದೆ ಆದರೆ ಆತನೊಂದಿಗೆ ರಕ್ತದ ಒಡಂಬಡಿಕೆಯಲ್ಲಿರುವವರಿಗೆ ಅವರ ಕೆಲಸದ ಸ್ಥಳದ ಮೇಲೆ ಆಶೀರ್ವಾದವನ್ನು ದೇವರು ಘೋಷಿಸುತ್ತಾನೆ. ಹೊಸ ಒಡಂಬಡಿಕೆಯಲ್ಲಿ ನಮಗಾಗಿ ನಾವು ಇದು ಎದುರು ನೋಡಲೂ ಆಗುವುದಿಲ್ಲವೆ?

## ನಿಮ್ಮ ಎಲ್ಲಾ ಕೈಕೆಲಸವು ಆಶೀರ್ವದಿಸಲ್ಪಟ್ಟಿವೆ

ಪತನವು (ಬೀಳುವಿಕೆಯು) ಕಠಿಣತೆ, ಬೆವರು, ಶ್ರಮ ಮತ್ತು ದುಡಿಮೆ, ಕೆಲಸದ ಸ್ಥಳದಲ್ಲಿ ಕನಿಷ್ಟವಾದ ಫಲವನ್ನು ತರುತ್ತದೆ. ರಕ್ತದ ಒಡಂಬಡಿಕೆಯಲ್ಲಿರುವವರಿಗೆ ಅವರ ಕೆಲಸದ ಮೇಲೆ ದೇವರು ಆಶೀರ್ವಾದಗಳನ್ನು ಘೋಷಿಸುತ್ತಾನೆ.

**ಧರ್ಮೋಪದೇಶಕಾಂಡ 28:8,12–13**

**8 ನಿಮ್ಮ ಕಣಜಗಳು ಯಾವಾಗಲೂ ತುಂಬಿರುವಂತೆಯೂ ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೂವನು ನಿಮಗೆ ಶುಭವನ್ನು ಅನುಗ್ರಹಿಸುವನು. ಆತನು ನಿಮಗೆ ಕೊಡುವ ದೇಶದಲ್ಲಿ ನಿಮಗೆ ಶುಭವನ್ನೇ ಉಂಟುಮಾಡುವನು.**

**12 ಯೆಹೋವನು ಆಕಾಶದಲ್ಲಿರುವ ತನ್ನ ಜಲನಿಧಿಯನ್ನು ತೆರೆದು ನಿಮ್ಮ ದೇಶದ ಮೇಲೆ ಬೆಳೆಗೆ ಬೇಕಾದ ಹಾಗೆ ಮಳೆಯನ್ನು ಸುರಿಸಿ ನಿಮ್ಮ ಎಲ್ಲಾ ವ್ಯವಸಾಯವನ್ನು ಸಫಲ ಮಾಡುವನು ನೀವು ಅನೇಕ ಜನಗಳಿಗೆ ಸಾಲ ಕೊಡುವಿರೇ ಹೊರತು ಸಾಲ ತೆಗೆದುಕೊಳ್ಳುವದಿಲ್ಲ**

**13 ನಾನು ಈಗ ನಿಮಗೆ ಬೋಧಿಸುವ ಮಾತುಗಳನ್ನು ನೀವು ಬಿಟ್ಟು ಎಡಬಲಕ್ಕೆ ತೊಲಗದೆ ಬೇರೆ ದೇವರುಗಳನ್ನು ಅವಲಂಬಿಸದೆ ನಿಮ್ಮ ದೇವರಾದ ಯೆಹೋವನ ಆಜ್ಞೆಗಳಲ್ಲೇ ಲಕ್ಷ್ಯವಿಟ್ಟು ಅವುಗಳನ್ನೇ ಅನುಸರಿಸಿ ನಡೆದರೆ ಆತನು ಇತರರಿಗೆ ನಿಮ್ಮನ್ನು ಅಧೀನಮಾಡದೆ ಎಲ್ಲರಿಗೂ ಶಿರಸ್ಸನ್ನಾಗಿಯೇ ಮಾಡುವನು ನೀವು ಎಲ್ಲರಿಗಿಂತಲೂ ಮೇಲಣವರಾಗಿರುವಿರೇ ಹೊರತು ಕೆಳಗಣವರಾಗಿವುದಿಲ್ಲ**

ಹಳೇ ಒಡಂಬಡಿಕೆಗೆ ಅಧೀನರಾಗಿ ಆತನ ಜನರು, ಆತನ ಮಾರ್ಗದಲ್ಲಿ ಮತ್ತು ಆತನ ವಾಕ್ಯಕ್ಕನುಸಾರವಾಗಿ ನಡೆದರೆ ಅವರು ಮಾಡುವಂತಹ ಎಲ್ಲಾ ಕೈಕೆಲಸಗಳಲ್ಲಿ

ಸಮೃದ್ಧಿಯನ್ನು ಹೊಂದುವರು ಎಂಬುದಾಗಿ ದೇವರು ಭರವಸೆ ನೀಡಿದ್ದಾರೆ ಪವಿತ್ರಾತ್ಮನಿಂದ ಪ್ರೇರಿತನಾಗಿ ಕೀರ್ತನೆಗಾರನು ಹೀಗೆ ಬರೆದಿದ್ದಾನೆ ''ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು ಅಂಥ ಮರವು ತಕ್ಕ ಕಾಲದಲ್ಲಿ ಫಲ ಕೊಡುತ್ತದಲ್ಲಾ ಅದರ ಎಲೆ ಬಾಡುವದೇ ಇಲ್ಲ ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು (ಕೀರ್ತನೆಗಳು 1:1–3)

## ಹೊಸ ಒಡಂಬಡಿಕೆಯಲ್ಲಿ ನಾವು ಇದನ್ನು ನಿರೀಕ್ಷಿಸಬಾರದ?

## **ಸಂಪತ್ತು ಪಡೆಯಲು ದೇವರು ಬಲವನ್ನು ಕೊಡುತ್ತಾನೆ**

ಹಳೇ ಒಡಂಬಡಿಕೆಯ ಅಧೀನದಲ್ಲಿದ್ದವರು ಕರ್ತನ ಭಯದಲ್ಲಿ ಮತ್ತು ಆತನಿಗೆ ವಿಧೇಯರಾಗಿ ಎಲ್ಲಿಯವರೆಗೂ ನಡೆಯುತ್ತಿದ್ದರೋ ಅಲ್ಲಿಯವರೆಗೂ ಅವರೊಂದಿಗಿನ ಆತನ ಒಡಂಬಡಿಕೆಯ ಭಾಗವಾಗಿ, ಸಂಪತ್ತು ಗಳಿಸಲು ಅವರಿಗೆ ಬಲವನ್ನು ದೇವರು ಕೊಟ್ಟಿದ್ದನು.

**ಧರ್ಮೋಪದೇಶಕಾಂಡ 8:18**
**ಆದದರಿಂದ ನಿಮ್ಮ ದೇವರಾದ ಯೆಹೋವನೇ ತಾನು ನಿಮ್ಮ ಪಿತೃಗಳಿಗೆ ಪ್ರಮಾಣಪೂರ್ವಕವಾಗಿ ಮಾಡಿದ ವಾಗ್ದಾನವನ್ನು ಈಗ ನಿಮ್ಮ ಅನುಭವಕ್ಕೆ ಬಂದ ರೀತಿಯಲ್ಲಿ ನೆರವೇರಿಸುವವನಾಗಿ ನಿಮಗೆ ಇಷ್ಟು ಭಾಗ್ಯವನ್ನುಸಂಪಾದಿಸುವುದಕ್ಕೆ ಸಾಮರ್ಥ್ಯವನ್ನು ಕೊಟ್ಟವನೆಂದು ಜ್ಞಾಪಕ ಮಾಡಿಕೊಳ್ಳಿರಿ.**

**ಕೀರ್ತನೆಗಳು 112:1–3**
**1 ಯಾಹುವಿಗೆ ಸ್ತೋತ್ರ ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಆತನ ಆಜ್ಞೆಗಳಲ್ಲಿ ಅತ್ಯಾನಂದಪಡವನೋ ಅವನೇ ಧನ್ಯನು**
**2 ಅವನ ಸಂತಾನವು ಲೋಕದಲ್ಲಿ ಬಲಿಷ್ಟವಾಗುವದು. ನೀತಿವಂತನ ವಂಶವು ಶುಭಹೊಂದುವದು ಅವನ ಮನೆಯಲ್ಲಿ ಧನೈಶ್ವರ್ಯಗಳಿರವವು**
**3 ಅವನ ನೀತಿಯು ಸದಾಕಾಲವೂ ಫಲಿಸುತ್ತಿರುವದು.**

## ಹೊಸ ಒಡಂಬಡಿಕೆಯಲ್ಲಿ ಇದನ್ನು ನಾವು ಎದುರುನೋಡುವುದು ಅಗತ್ಯವಲ್ಲವೇ?

## ದೋಚುವವನು ಗದರಿಸಲ್ಪಟ್ಟವನಾಗಿ ನಿಂತಿದ್ದಾನೆ

ಹಳೇ ಒಡಂಬಡಿಕೆ ಅಧೀನದಲ್ಲಿರುವವರು ಅವರ ದುಡಿಮೆಯ ಫಲದಿಂದ ದೇವರನ್ನು ಗೌರವಿಸಬೇಕೆಂಬುದಾಗಿ ಕಲಿಸಲ್ಪಟ್ಟಿದ್ದಾರೆ ಅವರು ಕೆಲಸದ ಸ್ಥಳದಲ್ಲಿ ಗಳಿಸಿದ್ದರಲ್ಲಿ ಕರ್ತನಿಗೆ ಒಂದು ಭಾಗವನ್ನು ಕೊಟ್ಟರು. ದೇವರಿಗೆ ಕೊಡುವುದು ಸತ್ಯವಾಗಿ ದೇವರ ಕಡೆಗೆ ಒಂದು ಆರಾಧನೆಯ ಕ್ರಿಯೆಯಾಗಿತ್ತು ಅದನ್ನು ನೋಡಿದರು, ಅವರು ಅಧಿಕವಾದ ಫಲವನ್ನು ಅನುಭವಿಸಿದರು.

**ಜ್ಞಾನೋಕ್ತಿಗಳು 3:9-10**
**9 ನಿನ್ನ ಆದಾಯದಿಂದಲೂ ಬೆಳೆಯ ಪ್ರಥಮ ಫಲದಿಂದಲೂ ಯೆಹೋವನನ್ನು ಸನ್ಮಾನಿಸು**
**10 ಹೀಗೆ ಮಾಡಿದರೆ ನಿನ್ನ ಕಣಜಗಳು ಸಮೃದ್ಧಿಯಿಂದ ತುಂಬುವವು ತೊಟ್ಟಿಗಳಲ್ಲಿ ದ್ರಾಕ್ಷಾರಸವು ತುಂಬಿತುಳುಕುವದು**

ದೇವರ ಮನೆಗೆ ಅವರ ಬೆಳೆಯ ಪ್ರಥಮ ಫಲದಿಂದ (ಆದಾಯ, ಸಂಪಾದಿಸಿದ್ದು) ದಶಮಭಾಗವನ್ನು ವಿಧೇಯರಾಗಿ ಯಾರಾರು ತಂದರೋ ಅವರಿಗೆ ದೇವರು ಹೀಗೆ ವಾಗ್ದಾನಮಾಡಿದನು ''ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು ಅದು ನಿಮ್ಮ ಭೂಮಿಯ ಫಲವನ್ನು ನಾಶಮಾಡದು ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು ಇದು ಸೇನಾಧೀಶ್ವರ ಯೆಹೋವನ ನುಡಿ'' (ಮಲಾಕಿಯ 3:11)

ಪತನ (ಬೀಳುವಿಕೆ) ಕೆಲಸದ ಸ್ಥಳದಲ್ಲಿ ''ಮುಳ್ಳುಗಿಡಗಳು ಮತ್ತು ಕಳೆಗಳನ್ನು'' ಉಂಟುಮಾಡಿದೆ. ಆದರೆ ಆತನಿಗೆ ವಿಧೇಯರಾಗಿ ನಡೆಯುವಂತಹ ಆತನ ಒಡಂಬಡಿಕೆಯ ಜನರಿಗೆ ಅವರ ಭೂಮಿಯ ಬೆಳೆಯ ಫಲವು ನಾಶವಾಗದಂತಹ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ದೇವರು ಸ್ವತಃ ಹೊಣೆಗಾರನಾಗಿ ನಿಂತುಕೊಂಡಿದ್ದಾನೆ.

## ಹೊಸ ಒಡಂಬಡಿಕೆಯಲ್ಲಿ ನಾವು ಇದನ್ನು ನಿರೀಕ್ಷಿಸಬಾರದಾ?

## ನಿಮ್ಮ ಕೈಗಳ ಕೆಲಸವನ್ನು ನೀವು ಆನಂದಿಸುವಿರಿ

ಹಳೇ ಒಡಂಬಡಿಕೆ ಅಧೀನದಲ್ಲಿನ ದೇವರ ಜನರು ಕರ್ತನ ಆಶೀರ್ವಾದದ ಭಾಗವಾಗಿ ಮತ್ತು ನಮ್ಮ ದುಡಿಮೆಯ ಫಲವನ್ನು ನಮ್ಮ ದುಡಿಮೆಯನ್ನು

ಆನಂದಿಸುತ್ತೇವೆ ಎಂಬುದಾಗಿ ಅರ್ಥಮಾಡಿಕೊಂಡಿದ್ದರು ಮತ್ತು ಇದು ನಮ್ಮೊಂದಿಗೆ ಹೀಗೆಯೇ ನಡೆಯುತ್ತದೆ.

**ಕೀರ್ತನೆಗಳು 128:1-2**
**ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಆತನ ಮಾರ್ಗಗಳಲ್ಲಿ ನಡೆಯುವವನು ಧನ್ಯನು ನಿನ್ನ ಕಷ್ಟಾರ್ಜಿತವನ್ನು ನೀನೇ ಅನುಭವಿಸುವಿ ನೀನು ಧನ್ಯನು ನಿನಗೆ ಶುಭವಿರುವದು**

**ಪ್ರಸಂಗಿ 3:13**
**ಇದಲ್ಲದೆ ಪ್ರತಿಯೊಬ್ಬನು ಅನ್ನಪಾನಗಳನ್ನು ತೆಗೆದುಕೊಂಡು ತನ್ನ ನಾನಾ ಪ್ರಯಾಸಗಳಲ್ಲಿಯೂ ಸುಖವನ್ನನುಭವಿಸುವದು ದೇವರ ಅನುಗ್ರಹವೇ ಎಂದು ನನಗೆ ಗೊತ್ತಿದೆ.**

**ಪ್ರಸಂಗಿ 5:19**
**ಇದೆ ಅವನ ಪಾಲು ಮತ್ತು ಆತನು ಯಾವನಿಗೆ ಆಸ್ತಿ ಪಾಸ್ತಿಗಳನ್ನು ದಯಪಾಲಿಸುವದಲ್ಲದೆ ಅದನ್ನು ಅನುಭವಿಸಿ ಪಾಲಿಗೆ ಬಂದದ್ದನ್ನು ಹೊಂದಿ ತನ್ನ ಪ್ರಯಾಸದಲ್ಲಿ ಸಂತೋಷಪಡಲ ಶಕ್ತಿಕೊಡುವವನ ಅವನ ಸುಖವು ದೇವರ ಅನುಗ್ರಹ**

ನಿಮ್ಮ ಕೆಲಸವನ್ನು ಮತ್ತು ನಿಮ್ಮ ಕೆಲಸದ ಫಲವನ್ನು ಆನಂದಿಸುವುದು ದೇವರ ಅನುಗ್ರಹವಾಗಿದೆ. ಇಂದು ಆತನ ಜನರಾದ ನಮಗೆ ಅದೇ ಅನುಗ್ರಹವನ್ನು ದೇವರು ಕೊಡುತ್ತಾನೆ.

# 3

# ಅಪರಿಪೂರ್ಣ ಪ್ರಪಂಚದಲ್ಲಿ ಕೆಲಸ ಮಾಡುವುದು

ವಿಶ್ವಾಸಿಗಳಾದ ನಮಗೆ ಈ ಒಂದು ಅಧ್ಯಯನದ ನಮ್ಮ ಉದ್ದೇಶವು, ನಮ್ಮ ಕೆಲಸದ ಸ್ಥಳವನ್ನು ವಿಮೋಚನೆಯ ಬೆಳಕಿನಲ್ಲಿ ನೋಡುವುದು ಮತ್ತು ನಮ್ಮ ಕೆಲಸದ ಸ್ಥಳ, ಕೆಲಸದ ಜೀವಿತ ಮತ್ತು ನಮ್ಮ ದುಡಿಮೆಗಾಗಿರುವ ದೇವರ ಮೂಲ ವಿನ್ಯಾಸವನ್ನು ಪುನಃ ಕಂಡುಹಿಡಿಯಲು ಆಯ್ಕೆಯನ್ನು ನಾವು ಖಂಡಿತವಾಗಿಯೂ ಯಥಾಸ್ಥಿತಿಗೆ ತಕ್ಕಂತೆ ನೆಲೆಸಬಹುದು, ಮತ್ತು ಪ್ರಪಂಚದ ಎಲ್ಲರಂತೆ ನಮ್ಮ ಕೆಲಸದ ಜೀವನದ ಮುಲಕ ಹೋಗಬಹುದು ಅಥವಾ ಕೆಲಸದ ಸ್ಥಳದಲ್ಲಿ ನಮ್ಮ ಹೊಸ ಒಡಂಬಡಿಕೆಯ ಆಶೀರ್ವಾದಗಳನ್ನು ಪಡೆಯುವ ಮತ್ತು ಕ್ರಿಸ್ತನ ವಿಮೋಚನೆಯ ಕೆಲಸವನ್ನು ಜಾರಿಗೊಳಿಸುವ ನಿಶ್ಚಯದ ಆಯ್ಕೆಯನ್ನು ಮಾಡಬಹುದು. ನಮ್ಮ ಕೆಲಸದ ಸ್ಥಳದಲ್ಲಿ ವಿಷಯಗಳು ಭಿನ್ನವಾಗಿರುತ್ತವೆಂದು ನಾವು ನಿರೀಕ್ಷಿಸಬಹುದು.

ನಿಮ್ಮ ತೋಟವನ್ನು ಉಳುಮೆ ಮಾಡುವಾಗ (ನಿಮ್ಮ ಕೆಲಸ ಮಾಡುವಾಗ) ದೇವರು ಮೂಲತಃ ಉದ್ದೇಶಿಸಿದ್ದನ್ನು ಸೆರೆಹಿಡಿಯಲು ನೀವು ಪ್ರಯತ್ನಿಸುತ್ತೀರಾ? ದೇವರ ಒಡಂಬಡಿಕೆಯ ಮುಗುವಾಗಿ ವಿಮೋಚನೆ ಹೊಂದಿದರಾಗಿ ನಿಮ್ಮದಾಗಿರುವಂತಹವುಗಳಾದ ಕೆಲಸದ ಜೀವಿತ, ಕೆಲಸದ ಸ್ಥಳ, ಮತ್ತು ನಿಮ್ಮ ಕೆಲಸವನ್ನು ಪಡೆದುಕೊಳ್ಳಲೂ ನಂಬಿಕೆಯಿಂದ ತಲುಪುತ್ತೀರಾ?

## ನಿಮ್ಮ ಕೆಲಸದ ಸ್ಥಳ ಮತ್ತು ಕೆಲಸದ ಜೀವನದ ಮೇಲೆ ಪರಿಣಾಮ ಬೀರಲು ಶಿಲುಬೆಯ ಶಕ್ತಿಯನ್ನು ನಿರೀಕ್ಷಿಸಿರಿ.

ನಾವು ಬಿದ್ದುಹೋದಂತಹ ಜಗತ್ತಿನಲ್ಲಿದ್ದೇವೆ. ಜೀವನವು ಯಾವಾಗಲೂ ಸುಖಕರವಾಗಿರುವುದಿಲ್ಲ. ಕೆಲಸದ ಸ್ಥಳದಲ್ಲಿನ ವಿಷಯಗಳು ಯಾವಾಗಲೂ ಸುಲಭವಾಗಿರುವುದಲ್ಲ. ಕೆಲಸದ ಸ್ಥಳದಲ್ಲಿ ನಿರುತ್ಸಾಹಗಳು, ಬದಲಾವಣೆಗಳು

ಅನ್ಯಾಯದ ಮೇಲಾಧಿಕಾರಿಗಳು, ಮತ್ತು ನಿರ್ಲಜ್ಜ ಕೆಲಸಗಳನ್ನು ಮಾಡುವ ಜನರಿರುತ್ತಾರೆ. ಮಾರುಕಟ್ಟೆಗಳು ಮೇಲೆರುತ್ತವೆ ಮತ್ತು ಕೆಳಗಿಳಿಯುತ್ತವೆ, ಆರ್ಥಿಕ ಪರಿಸ್ಥಿತಿ ಏರುತ್ತದೆ ಮತ್ತು ಬಿದ್ದು ಹೋಗುತ್ತದೆ. ಮತ್ತು ಕೆಲಸದಿಂದ ವಜಾಮಾಡುವುದು ಇರುತ್ತದೆ. ಇಳಿಕೆಗಳು ಮತ್ತು ಎಲ್ಲಾ ರೀತಿಯ ಅನಿರೀಕ್ಷಿತ ಅನಾನುಕೂಲ ಬದಲಾವಣೆಗಳು ಕಂಡುಬರುತ್ತವೆ. ಕೆಲವು ಸಂಘಸಂಸ್ಥೆಗಳು ಅನೈತಿಕ ವಿಧಾನಗಳು ದೈವಿಕವಲ್ಲದ್ದನ್ನು ಉತ್ತೇಜಿಸುವುದು ಮುಂತಾದವುಗಳ ಮೂಲಕ ದೊಡ್ಡದಾಗಿ ಲಾಭಗಳಿಸುತ್ತಿದೆ. ಒಂದು ಕಡೆಯಲ್ಲಿ ದೊಡ್ಡದಾದ ಐಶ್ವರ್ಯವಿದೆ ಇನ್ನೊಂದು ಕಡೆಯಲ್ಲಿ ತುಂಬಾ ಬಡತನ ಮತ್ತು ಇತರೆ ಕೊರತೆಗಳಿವೆ. ಇವೆಲ್ಲದರ ಮಧ್ಯದಲ್ಲಿ ವಿಶ್ವಾಸಿಗಳಾದ ನಾವುಗಳು ಕೆಲಸದ ಸ್ಥಳದಲ್ಲಿ ನಮಗೆ ಯಾವುದೇ ಪಾತ್ರಗಳು ಇರಬಹುದು ಅವುಗಳನ್ನು ವಿಮೋಚನೆ ಹೊಂದಿದ ಒಡಂಬಡಿಕೆ ಜನರಾಗಿ ನಿಶ್ಚಲವಾಗಿ ಮಾಡುವವರಾಗಿರೋಣ?

**ನನ್ನ ನಂಬಿಕೆಯ ಘೋಷಣೆ:** ನಾನು ಕೆಲಸದ ಸ್ಥಳಕ್ಕೆ ಹೋಗುವಾಗ, ನನ್ನ ಕೆಲಸದ ಜೀವನ, ನನ್ನ ಕೆಲಸದ ಸ್ಥಳ, ಮತ್ತು ನನ್ನ ಮೇಲೆ ಪರಿಣಾಮ ಬೀರುವ ಶಿಲುಬೆಯ ವಿಮೋಚನೆಯ ಬಲವನ್ನು ನಾನು ಪಡೆದುಕೊಳ್ಳುತ್ತೇನೆ. ಶಿಲುಬೆಯ ನಿಮಿತ್ತದಿಂದ ಶಾಪವು ವ್ಯತಿರಿಕ್ತವಾಗಿದೆ ಮತ್ತು ನನ್ನ ಕೆಲಸದ ಸ್ಥಳವು ಆಶೀರ್ವದಿಸಲ್ಪಟ್ಟಿದೆ. ಶಿಲುಬೆಯ ನಿಮಿತ್ತದಿಂದ ನಾನು ಮಾಡುವಂತಹ ಕೆಲಸದಲ್ಲಿ ಸಂತೋಷವನ್ನು ಮತ್ತು ಫಲದಾಯಕತೆಯನ್ನು ಘೋಷಿಸುತ್ತೇನೆ. ಶಿಲುಬೆಯ ನಿಮಿತ್ತದಿಂದ ಮುಳ್ಳುಗಿಡಗಳು ಮತ್ತು ಮುಳ್ಳುಗಳನ್ನು ಕೆಲಸದ ಸ್ಥಳದಲ್ಲಿ ನೋವಿಗೆ ಕಾರಣವಾಗುವವುಗಳು, ಅಡ್ಡಿಗಳು, ವಿರೋಧದ ಸಂಗತಿಗಳನ್ನು ನಿರಾಕರಿಸುತ್ತೇನೆ. ಬದಲಾಗಿ ದೇವರ ಉದ್ದೇಶಗಳು ಸ್ಥಾಪಿಸಲ್ಪಡುವಂತೆ ಘೋಷಿಸುತ್ತೇನೆ. ಶಿಲುಬೆಯ ನಿಮಿತ್ತದಿಂದ ಕೆಲಸದ ಸ್ಥಳಕ್ಕಾಗಿ ಇರುವ ದೇವರ ಮೂಲ ವಿನ್ಯಾಸವನ್ನು ಮರುಪಡೆಯುತ್ತೇನೆ.

## ನಿಮ್ಮ ಕೆಲಸದ ದಿನದ ಮೂಲಕ ದೇವರನ್ನು ಆರಾಧಿಸಿರಿ

ನಿಮ್ಮ ಸುತ್ತಲಿನ ಉಳಿದ ಜನರುಗಳು ''ದುರ್ಧನ ದೇವತೆಯನ್ನು'' ಕಬಳಿಸುವಿಕೆಯ ಯಾವುದೇ ವಿಧಾನದಿಂದ ಸಂಪತ್ತನ್ನು ಗಳಿಸುತ್ತಿರಬಹುದು ನಿನ್ನ ದಿನದ ಅವಧಿಯಲ್ಲಿ ನೀನು, ಆತನ ಪ್ರಸನ್ನತೆಯನ್ನು ಅನುಭವಿಸಲು ಮತ್ತು ಆತನನ್ನು ಆರಾಧಿಸುವುದನ್ನು ಹುಡುಕುತ್ತಿಯೋ? ದಿನದುದ್ದಕ್ಕೂ ಕೆಲಸದ ಸ್ಥಳದಲ್ಲಿ ದೇವರ ಪ್ರಸನ್ನತೆಯನ್ನು ನೀನು ಏರ್ಪಡಿಸುತ್ತಿಯೋ?

ಎಲ್ಲಾ ಇತರೆ ಎಲ್ಲವೂ ನಿನಗೆ ದೊರಕುವವೆಂದು ತಿಳಿದು ನಿನ್ನ ಕೆಲಸದ ದಿನದ ಎಲ್ಲಾ ಸಮಯಗಳಲ್ಲಿಯೂ ಮೊದಲು ಆತನ ರಾಜ್ಯಕ್ಕಾಗಿಯೂ ಮತ್ತು ಆತನ ನೀತಿಗಾಗಿಯೂ ತವಕ ಪಡುತ್ತಿಯೋ (ಮತ್ತಾಯ 6:33)

ಇದನ್ನು ಮಾಡಲೂ ಕೆಲವು ಮಾರ್ಗಗಳೆಂದರೆ ದಿನಪೂರ್ತಿ ನಿನ್ನೊಳಗೆ ಆಗಾಗ್ಗೆ ಪ್ರಾರ್ಥನೆ ಮಾಡುತ್ತೀರು. ದಿನಪೂರ್ತಿ ದೇವರಿಗೆ ''ಟ್ವೀಟ್ಸ್'' ಮೂಲಕ ಚಿಕ್ಕದಾದ ಪ್ರಾರ್ಥನೆಗಳನ್ನು ಕಳುಹಿಸುವಂತೆ ಕಾಣುತ್ತದೆ. ನೀನು ಮಾಡುತ್ತಿರುವ ಕೆಲಸದ ಕುರಿತು – ನೀನು ಮಾಡಲಿರುವಂತಹ ಕರೆಗಳ ಕುರಿತು, ನೀನು ಹೋಗಲಿಕ್ಕಿರುವಂತಹ ಕೆಲಸದ ಸಭೆ ಸೇರುವುದರ ಕುರಿತು ನೀನು ಮಾಡಬೇಕಾಗಿರುವಂತಹ ಕೆಲಸದ ವಿನ್ಯಾಸ, ನೀನು ತಲುಪಬೇಕಾಗಿರುವಂತಹ ಮಾರಾಟದ ಗುರಿಗಳು ನೀನು ಕೊಡಲಿರುವ ಉಪನ್ಯಾಸದ ಏನಾದರೂ! ದೇವರೊಂದಿಗೆ ಮಾತಾನಾಡು, ನೀನು ಕೆಲಸ ಮಾಡುವವುಗಳೊಡನೆ ಜರುಗುತ್ತಿರುವಂತಹ ಪ್ರತಿಯೊಂದು ಉತ್ತಮ ವಿಷಯಗಳಿಗಾಗಿ, ನೀನು ನೋಡುತ್ತಿರುವಂತಹ ಪ್ರತಿಯೊಂದು ಸಣ್ಣದಾದ ಆಶೀರ್ವಾದಗಳಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ!

ದಿನಪೂರ್ತಿ ಆತನ ಬಗ್ಗೆ ಜಾಗರೂಕನಾಗಿರು. ಸಾಧ್ಯವಾದಾಗಲೆಲ್ಲಾ ನಿನ್ನಲ್ಲಿ ಒಂದು ಹಾಡನ್ನು ಇಟ್ಟುಕೊಳ್ಳಿರಿ. ನಿಮ್ಮೊಳಗೆ ಮಾತಾಡಿರಿ ಅಥವಾ ಹಾಡಿರಿ ''ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ....'' (ಎಫೆಸದವರಿಗೆ 5:19-20)

ದಿನಪೂರ್ತಿ ದೇವರ ಪ್ರೀತಿಯಲ್ಲಿ ಮತ್ತು ಶಾಂತಿಯಲ್ಲಿ ನಡೆಯಿರಿ. ಪ್ರೀತಿಯಲ್ಲಿ ನಡೆಯುವುದು ಮತ್ತು ಶಾಂತಿಯಲ್ಲಿ ನಡೆಯುವುದು ಸಾಮಾನ್ಯವಾಗಿ ''ಆತನಲ್ಲಿ'' ಆತನ ಪ್ರಸನ್ನತೆಯಲ್ಲಿ ನಡೆಯುವುದಾಗಿದೆ. ''... ಅವನಲ್ಲಿ ದೇವರು ನೆಲೆಗೊಂಡಿದ್ದಾನೆ ಅವನು ದೇವರಲ್ಲಿ ನೆಲೆಗೊಂಡಿದ್ದಾನೆ'' (1 ಯೋಹಾನ 4:16).

## ದೇವರಿಗಾಗಿ ಆರಾಧನೆ ಮತ್ತು ಕೆಲಸ ಮಾಡಿರಿ

ನಿಮ್ಮ ಕೆಲಸವನ್ನು ಒಂದು ಚಿಲ್ಲರೆ ಕೆಲಸ, ಅಗತ್ಯವಾದ ದುಷ್ಟ ನೀವು ಹೊತ್ತುಕೊಳ್ಳಬೇಕಾದಂತಹ ಒಂದು ಭಾರ, ಅಥವಾ ಇತರೆ ಕೆಲವು ''ಪ್ರಾಪಂಚಿಕ''

ಅಥವಾ ಅದೈವಿಕವಾದ ವಿಷಯವಾಗಿದೆ ಎಂಬುದಾಗಿ ನೋಡಬೇಡಿರಿ. ದೇವರು ಕೆಲಸವನ್ನು ರಚಿಸಿದ್ದಾನೆ ಮತ್ತು ಇದು ಒಂದು ಉತ್ತಮ ವಿಷಯವಾಗಿದೆ. ದೇವರು ಮಾಡಬೇಕೆಂಬುದಾಗಿ ಅಪೇಕ್ಷಿಸಿದ್ದನ್ನು ನೀವು ಮಾಡುತ್ತಿರುವುದಾದರೆ – ನೀವು ಆತನ ನಿಯೋಜನೆಯಲ್ಲಿದ್ದೀರಿ. ನೀವು ಆತನ ಚಿತ್ತವನ್ನು ಮಾಡುತ್ತಿದ್ದೀರಿ. ನಿಮ್ಮ ಕೆಲಸ ಮತ್ತು ನಿಮ್ಮ ಆರಾಧನೆಯು ದೇವರಿಗಾಗಿಯೇ ಮಾಡಲ್ಪಟ್ಟವುಗಳಾಗುತ್ತವೆ. ನೀವು ಆರಾಧನೆ ಮಾಡುವಾಗ ನಿಮ್ಮ ಪೂರ್ಣಹೃದಯದಿಂದ ಅದನ್ನು ಮಾಡುತ್ತೀರಿ ಅದೇ ರೀತಿಯಾಗಿ ನೀವು ಕೆಲಸ ಮಾಡುವಾಗ ದೇವರಿಗಾಗಿಯೇ ಎಂಬುದಾಗಿ ಪೂರ್ಣ ಹೃದಯದಿಂದ ಮಾಡಿರಿ. ''ಸರಳ ಮನಸ್ಸಿನಿಂದ ಕೆಲಸ ಮಾಡಿರಿ ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಪೂರ್ವಕವಾಗಿ ಮಾಡಿರಿ ಕರ್ತನಿಂದ ಪರಲೋಕದ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ ನೀವು ಕರ್ತನಾದ ಕ್ರಿಸ್ತನಿಗೆ ದಾಸರಾಗಿದ್ದೀರಿ (ಕೊಲೊಸ್ಸೆಯವರಿಗೆ 3:23,24)

ನೀವು ದ್ವೇಷಿಸುವ ಕೆಲವು ಕಾರ್ಯಗಳು ಇರಬಹುದು ನಿಮ್ಮನ್ನು ಎಲ್ಲಿಯು ಕರೆದೊಯ್ಯುತ್ತಿಲ್ಲವೆಂಬುದಾಗಿ ಕಾಣಿಸುವ ಕೆಲವು ಕಾರ್ಯ ನಿಯೋಜನೆಗಳು ಕೊಡಲ್ಪಟ್ಟಿರಬಹುದು. ನೀವು ಕೆಲವು ಅಂತಿಮ ಘಟ್ಟದ ಸ್ಥಿತಿಗಳನ್ನು ಪ್ರತಿನಿಧಿಸಬಹುದು ಮತ್ತು ನಿಮ್ಮಿಂದ ಕೇಳಲ್ಪಟ್ಟಂತಹ ಕೆಲಸವನ್ನು ಸಾಧಿಸುವುದು ಹೆಚ್ಚು ಅಸಂಭವವೆಂದು ನಿಮಗೆ ತಿಳಿದಿರಬಹುದು. ನೀವು ಮಾಡುವಂತಹ ಕೆಲಸವನ್ನು ಮೆಚ್ಚಿಕೊಳ್ಳದಂತಹ ಕೃತಜ್ಞತೆ ಇಲ್ಲದ ಮೇಲಾಧಿಕಾರಿಗಳನ್ನು ಹೊಂದಿರಬಹುದು. ಕೆಲಸದ ಸ್ಥಳದಲ್ಲಿ ನಾವೆಲ್ಲರೂ ಅಂತಹ ಸನ್ನಿವೇಶಗಳನ್ನು ಎದುರಿಸುತ್ತೇವೆ. ಆದರೆ ಅಂತಹ ಪರಿಸ್ಥಿತಿಗಳ ಮಧ್ಯದಲ್ಲಿ ದೇವರನ್ನು ದೃಷ್ಟಿಸಿ ನೋಡಿರಿ ಮತ್ತು ನಿಮಗಾಗಿ ವಹಿಸಿಕೊಟ್ಟಿರುವ ಕೆಲಸಗಳನ್ನು ಉಲ್ಲಾಸದೊಡನೆ ಕೃತಜ್ಞತಾ ಹೃದಯ, ದೇವರಿಗಾಗಿ ಎಂಬುದಾಗಿ ಮಾಡಿರಿ! ''ನಗು ಮುಖದಿಂದ ಕೆಲಸವನ್ನು ಮಾಡಿರಿ, ಯಾರು ಆದೇಶಗಳನ್ನು ನೀಡುತ್ತಿದ್ದಾರೋ ಎಂಬುದು ಪರವಾಗಿಲ್ಲ, ನೀವು ನಿಜವಾಗಿ ದೇವರಿಗೆ ಸೇವೆ ಮಾಡುತ್ತಿದ್ದೇನೆಂಬುದನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಳ್ಳಿರಿ.'' (ಎಫೆಸದವರಿಗೆ 6:7, ಮೆಸೇಜ್ ಬೈಬಲ್)

## ಕೆಲಸದಲ್ಲಿ ದೇವರು ನಿಮ್ಮೊಂದಿಗಿದ್ದಾನೆ

ನೀವು ಕೆಲಸದ ಸ್ಥಳಕ್ಕೆ ಹೋಗುವಾಗ, ನೀವು ಅಲ್ಲಿ ಒಬ್ಬಂಟಿಗರಾಗಿರುವುದಿಲ್ಲ. ದೇವರು ನಿಮ್ಮೊಂದಿಗೆ ಅಲ್ಲಿರುತ್ತನೆ. ನೀವು ಆತನ ಸೇವಕರಾಗಿ ಅಲ್ಲಿರುತ್ತೀರಿ

(ಎಫೆಸದವರಿಗೆ 6:6) ಆತನ ಪವಿತ್ರಾತ್ಮನಿಂದ ನಿಮ್ಮನ್ನು ಬಲಗೊಳಿಸಲು, ಸಂಗತಿಗಳನ್ನು ನಿಮಗೆ ಕಲಿಸಲು ವಿಷಯಗಳನ್ನು ನಿಮಗೆ ಪ್ರಕಟಿಸಲು, ಜ್ಞಾನವನ್ನು ಕೊಡಲೂ, ತಿಳುವಳಿಕೆ, ಪ್ರಕಟನೆ ಸೂಕ್ಷ್ಮ ಪರಿಜ್ಞಾನ, ಚಾತುರ್ಯ, ಮುಂತಾದವುಗಳನ್ನು ಕೆಲಸದ ಸ್ಥಳದಲಲ್ಲಿ ನಿಮಗೆ ನೀಡಲೂ ದೇವರು ನಿಮ್ಮೊಂದಿಗಿರುತ್ತಾನೆ. ನೀವು ರಚಿಸುವುದನ್ನು ಮಾಡಲೂ, ತೊಂದರೆಗಳನ್ನು ಬಗೆಹರಿಸಲು ಜನರ ನಡುವೆ ಜಗಳಗಳನ್ನು ಬಗೆಹರಿಸಲೂ, ಮುಂದಿರುವ ಧ್ಯೇಯಗಳಿಗಾಗಿ ಯೋಜನಾ ತಂತ್ರವನ್ನು ರೂಪಿಸಲೂ ಇನ್ನು ಮುಂತಾದವುಗಳನ್ನು ಮಾಡಲೂ ಸಹಾಯ ಮಾಡಲೂ ದೇವರು ಅಲ್ಲಿರುತ್ತಾನೆ. ಆದ್ದರಿಂದ ನಿಮ್ಮ ಕೆಲಸದ ಸ್ಥಳದಲ್ಲಿ ನೀವು ಆತನಿಗೆ ಒಳಗಾಗಿ, ಆತನ ಜ್ಞಾನವನ್ನು ಹುಡುಕುವ ಮತ್ತು ನಿಮ್ಮ ಮೂಲಕವಾಗಿ ಆತನ ಸೃಷ್ಟಿಶೀಲ ಸಾಮರ್ಥ್ಯ ಗಳು ಬಿಡುಗಡೆಗೊಳ್ಳಲೂ ಅವಕಾಶ ಕೊಡುತ್ತೀರಾ? ನೀವು ದೇವರೊಂದಿಗೆ ಪಾಲುಗಾರರಾಗಿರುವುದು ಮತ್ತು ನಿಮ್ಮ ಕೆಲಸದ ಸ್ಥಳದಲ್ಲಿ ನೀವು ಮಾಡಬೇಕೆಂಬುದಾಗಿ ವಹಿಸಿರುವ ಕೆಲಸಗಳಲ್ಲಿ ಆತನೊಡನೆ ಜೊತೆ ಕೆಲಸದವರಾಗಿರಲೂ ಬಯಸುತ್ತೀರಾ? ನೀವು ರೈತರಾಗಿರಬಹುದು ಶಾಲೆಯ ಒಬ್ಬ ಶಿಕ್ಷಕಿಯಾಗಿಬಹುದು, ಒಬ್ಬ ವ್ಯಾಪಾರಸ್ಥನಾಗಿರಬಹುದು ಅಥವಾ ಒಬ್ಬ ಮಾರಾಟಗಾರನಾಗಿರಬಹುದು ಅಥವಾ ಬೇರೆ ಯಾವ ಕೆಲಸವನ್ನಾದರೂ ಮಾಡುತ್ತಿರಬಹುದು ದೇವರು ನಿಮ್ಮೊಂದಿಗೆ ಜೊತೆ ಕೆಲಸ ಮಾಡಲೂ ಬಯಸುತ್ತಾನೆ!

### ಒಂದು ಸಾಮಾನ್ಯ ಫಲಿತಾಂಶವಾಗಿ, ಫಲಭರಿತತೆ, ದ್ವಿಗುಣತೆ ಮತ್ತು ಹೆಚ್ಚಳವನ್ನು ಅಪೇಕ್ಷಿಸಿರಿ.

ನೀವು ದೇವರೊಂದಿಗೆ ಒಡಂಬಡಿಕೆಯಲ್ಲಿರುವದರಿಂದ ನೀವು ಆಶೀರ್ವಸಲ್ಪಟ್ಟವರು, ಫಲಭರಿತತೆ, ದ್ವಿಗುಣತೆ ಮತ್ತು ಹೆಚ್ಚಳವನ್ನು ಬಯಸಿರಿ ಎಂಬುದಾಗಿ ದೇವರು ಘೋಷಿಸಿದ್ದಾನೆ. ನಾವು ಹಿಂದಿನ ಅಧ್ಯಾಯದಲ್ಲಿ ಹೇಳಬಹುದಾದವುಗಳನ್ನು ಈಗಾಗಲೇ ಚರ್ಚಿಸಿದ್ದೇವೆ.

- ನಿಮ್ಮ ನೆಲ (ಕೆಲಸದ ಸ್ಥಳ) ಆಶೀರ್ವದಿಸಲ್ಪಟ್ಟಿದೆ
- ನಿಮ್ಮ ಕೈಗಳ ಎಲ್ಲಾ ಕೆಲಸಗಳು ಆಶೀರ್ವದಿಸಲ್ಪಟ್ಟಿವೆ
- ಸಂಪತ್ತನ್ನು ಹೊಂದಲು ದೇವರು ಬಲಕೊಡುತ್ತಾನೆ.
- ನುಂಗಿಬಿಡುವನು ಗದರಿಸಲ್ಪಟ್ಟಿದ್ದಾನೆ ಮತ್ತು ನಿಮ್ಮ ದುಡಿಮೆಯ ಫಲವನ್ನು ನಾಶಮಾಡಲೂ ಸಾಧ್ಯವಾಗುವುದಿಲ್ಲ

ನೀವು ವಿಫಲತೆಗಳು ಅಥವಾ ನಿರುತ್ಸಾಹಗಳು ಅಥವಾ ಹಿನ್ನಡೆಗಳನ್ನು ಎದುರುಗೊಳ್ಳುವುದಿಲ್ಲ ಎಂಬುದಾಗಿ ಅರ್ಥವಲ್ಲ ಇಂತಹವುಗಳು ಜರುಗುತ್ತವೆ. ಇಂತಹ ಎಲ್ಲಾ ಪರಿಸ್ಥಿತಿಗಳ ಮಧ್ಯದಲ್ಲೂ ಎದ್ದುನಿಲ್ಲಲು ಪ್ರೋತ್ಸಾಹ ಮತ್ತು ನಂಬಿಕೆಯನ್ನು ನೀವು ಹೊಂದಿಕೊಳ್ಳಬಹುದು ಯಾಕೆಂದರೆ ದೇವರು ನಿಮ್ಮ ಪಕ್ಷದಲ್ಲಿದ್ದಾನೆ. ಮತ್ತು ನೀವು ದೇವರೊಂದಿಗೆ ಒಂದು ಒಡಂಬಡಿಕೆಯಲ್ಲಿದ್ದೀರಿ ಎಂಬುದು ನಿಮಗೆ ತಿಳಿದದೆ. ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳದೇ ನೀವು ಇನ್ನೂ ಸಂಪೂರ್ಣ ನಂಬಿಕೆ ಮತ್ತು ಪ್ರೋತ್ಸಾಹವುಳ್ಳವರಾಗಿರಬಹುದು ಮತ್ತು ದೇವರು ನಿಮ್ಮನ್ನು ನಿರಂತರವಾಗಿ ಫಲದಾಯಕತೆ, ದ್ವಿಗುಣತೆ ಮತ್ತು ಹೆಚ್ಚಳದಲ್ಲಿ ನಡೆಸುವುದನ್ನು ನೋಡಬಹುದು. ಆತನು ಮಾಡುತ್ತಾನೆ!

ಕೆಟ್ಟ ಸಮಯದಲ್ಲಿ, ಆತನು ನಿಮ್ಮ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಾನೆಂಬುದಾಗಿ ವಾಗ್ದಾನ ಮಾಡಿದ್ದಾನೆ. ‘‘ಯೆಹೋವನು ಸದ್ಭಕ್ತರ ಜೀವಮಾನವನ್ನು ಲಕ್ಷಿಸುತ್ತಾನೆ ಅವರ ಸ್ವಾಸ್ತ್ಯವು ಶಾಶ್ವತವಾಗಿ ನಿಲ್ಲುವದು. ಅವರಿಗೆ ವಿಪತ್ಕಾಲದಲ್ಲಿಯೂ ಆಶಾಭಂಗವಾಗುವದಿಲ್ಲ. ಬರಗಾಲದಲ್ಲಿಯೂ ಅವರಿಗೆ ಕೊರತೆಯಿಲ್ಲ’’ (ಕೀರ್ತನೆಗಳು 37:18,19)

## ನಿಮ್ಮ ಕೆಲಸವು ಆನಂದಕರವಾದುದು, ಸಂತೋಷದ ಸಂಗತಿಯಾಗಿದೆ

ಕೆಲಸವನ್ನು ನಾವು ಆನಂದಿಸುವಂತದ್ದಾಗಿ ದೇವರು ವಿನ್ಯಾಸಗೊಳಿಸಿದ್ದಾನೆ. ಆತನು ನೀವು ಮಾಡಬೇಂಬುದಾಗಿ ವಿನ್ಯಾಸಗೊಳಿಸಿದ್ದಂತಹ ಕಾರ್ಯಸ್ಥಳದಲ್ಲಿ ನಿಮ್ಮನ್ನು ಇರಿಸಲೂ ದೇವರನ್ನು ಕೇಳಿಕೊಳ್ಳಿರಿ. ಇಲ್ಲಿ ನೀವು ಏಳಿಗೆಯಾಗುತ್ತೀರಿ ಮತ್ತು ನೀವು ಮಾಡುತ್ತಿರುವವುಗಳನ್ನು ಆನಂದಿಸಿರಿ ನೀವು ಮಾಡುತ್ತಿರುವವುಗಳಲ್ಲಿ ನೀವು ಬೆಳವಣಿಗೆ ಹೊಂದುತ್ತೀರಿ. ಬದಲಾವಣೆಗಳನ್ನು ಮಾಡಲೂ ಮತ್ತು ಆತನು ತೆರೆದಿಡದಿರದಂತಹ ಹೊಸ ಸಂಗತಿಗಳಿಗೆ ವರ್ಗಾವಣೆಗೊಳ್ಳಲೂ ಭಯಪಡಬೇಡಿರಿ. ನಿಮ್ಮ ಕೆಲಸದ ಸ್ಥಳದಲ್ಲಿ ಆತನ ಒಳ್ಳೆಯತನವನ್ನು ಆಚರಿಸಿರಿ.

ನಿಮ್ಮ ಕೆಲಸದಲ್ಲಿರುವ ಅತೃಪ್ತಿ, ಚಡಪಡಿಕೆ ಮುಂತಾದವುಗಳನ್ನು ಗುರ್ತಿಸಿ, ಇದರ ಕುರಿತು ದೇವರೊಂದಿಗೆ ಮಾತಾನಾಡಲೂ ಸಮಯ ತೆಗೆದುಕೊಳ್ಳಿರಿ. ಕೆಲವು ಸಮಯಗಳಲ್ಲಿ ನಮ್ಮ ಆಲೋಚನೆಯ ಹೊಂದಾಣಿಕೆ ಕೆಲಸದ ಕಡೆಗೆ ನಮ್ಮ ಹೃದಯದಲ್ಲಿ ಒಂದು ಬದಲಾವಣೆ ಅಗತ್ಯವಿದೆ. ಬದಲಾವಣೆ ಅವಶ್ಯಕವಾಗಿದೆ ಎಂಬುದಕ್ಕೆ ಅತೃಪ್ತಿಯು ಒಂದು ಸೂಚಕವಾಗಿದೆ ಎಂಬುದು ಕೆಲವು ಸಮಯಗಳಲ್ಲಿ ಸಾಧ್ಯಕರವಾಗಿರುತ್ತದೆ. ಆತನೊಂದಿಗೆ ಚಲಿಸಲು ದೇವರ ಮಾರ್ಗದರ್ಶನ ಹುಡುಕಿರಿ. ಆನಂದದ ಸ್ಥಳದಲ್ಲಿರಿ!!

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ 5000 ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು, ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''***ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ***'' ಎಂದು ಹೇಳುತ್ತದೆ **(ರೋಮಾಪುರದವರಿಗೆ 6:23)**. ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ

ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ...''*** **(ಅಪೊಸ್ತಲರ ಕೃತ್ಯಗಳು 10:43).**

***''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದು''*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

*ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.*

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೇನ್*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸುಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವುದರಿಂದ ಸ್ಥಳೀಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅದ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don’t Compromise Your Calling
Don’t Lose Hope
Equipping the Saints
Foundations (Track 1)
Fulfilling God’s Purpose for Your Life
Gifts of the Holy Spirit
Giving Birth to the Purposes of God
God Is a Good God
God’s Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don’t Take Them
Open Heavens
Our Redemption
Receiving God’s Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father’s Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner’s Fire
The Spirit of Wisdom, Revelation and Power
The Wonderful Benefits of Speaking in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು ಪಿ.ಡಿ.ಎಫ್ ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ.ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್(ಸಲಹೆ)

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ್ ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವುದಾಗಿದೆ.

- **ಹದಿಹರೆಯದವರು**
- **ವೈಯಕ್ತಿಕ ಹೊಂದಾಣಿಕೆಗಳು**
- **ಸಂಬಂಧಿತ ಸವಾಲುಗಳು**
- **ಶೈಕ್ಷಣಿಕ ಕಡಿಮೆ ಸಾಧನೆ**
- **ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳು**
- **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
- **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
- **ವರ್ತನೆಯ ಅಸ್ತವ್ಯಸ್ತತೆಗಳು**
- **ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
- **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
- **ಒತ್ತಡ / ಆಘಾತ**
- **ಮಧುಪಾನ/ ಮಾದಕ ವಸ್ತು ದುರುಪಯೋಗ**
- **ಆತ್ಮೀಕ ಸಮಸ್ಯೆಗಳು**
- **ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ್ ಸೇವೆಗಳು ಕೈಗೆಟುಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ**: +91-80-25452617 ಅಥವಾ ಟೋಲ್-ಫ್ರೀ (ಭಾರತದೊಳಗೆ) 1-800-300-00998
**ಇಮೇಲ್: counselor@chrysalislife.org**

ಕ್ರಿಸಾಲಿಸ್ ಕೌನ್ಸೆಲಿಂಗ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್‌ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ ''ಆಲ್ ಪೀಪಲ್ಸ್ ಸಭೆ'' ಬೆಂಗಳೂರು ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru, 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ:* **apcwo.org/give.**

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!
**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

ಕೆಲಸದ ಸ್ಥಳದಲ್ಲಿ ಪತನವು ತನ್ನದೇ ಪರಿಣಾಮ ಹೊಂದಿದೆ. ಕೆಲಸದ ಸ್ಥಳವು ಶಾಪಗ್ರಸ್ತವಾಯಿತು. ಫಲವನ್ನು ಅನುಭವಿಸಲು ಬೆವರು, ದುಡಿಮೆ ಮತ್ತು ಶ್ರಮವಿರುತ್ತದೆ ಮತ್ತು ಒಬ್ಬ ವ್ಯಕ್ತಿಯ ಜೀವನದುದ್ದಕ್ಕೂ ಇದು ಮುಂದುವರೆಯುತ್ತದೆ. ವಿಶ್ವಾಸಿಗಳಾಗಿ, ನಾವುಗಳು ಬಿದ್ದುಹೋಗಿರುವ ಈ ಪ್ರಪಂಚದಲ್ಲಿ ಜೀವಿಸುವವರು ಆದರೂ ದೇವರೊಂದಿಗೆ ಒಡಂಬಡಿಕೆಯಲ್ಲಿರುವ ವಿಮೋಚನೆಯ ಜನರಾಗಿದ್ದೇವೆ. ಆದ್ದರಿಂದ ಈ ಲೋಕದಲ್ಲಿರುವ ದುಷ್ಟನನ್ನು ನಾವು ಎದುರಿಸುವುದು ಸತ್ಯಕರವಾಗಿದೆ. ಆದಾಗ್ಯೂ ಕರ್ತನ ವಿಮೋಚನೆಯುಳ್ಳವರಾಗಿ ಶಿಲುಬೆಯ ಬಲವು ಜೀವಿತಗಳಲ್ಲಿ ಕಾರ್ಯನಿರತವಾಗಿರುವಂತಹ ಹೊಸ ಒಡಂಬಡಿಕೆಯುಳ್ಳ ಜನರು ಆಗಿ ಜೀವಿಸಲು ಇಲ್ಲಿದ್ದೇವೆ. ಪ್ರತಿದಿನ ನಮ್ಮ ಕೆಲಸದ ಸ್ಥಳಕ್ಕೆ ನಾವು ಹೋಗುವಾಗ ನಮ್ಮ ಕೆಲಸದ ಜೀವನ, ನಮ್ಮ ಕೆಲಸದ ಸ್ಥಳ ಮತ್ತು ನಮ್ಮ ಕೆಲಸದ ಮೇಲೆ ಶಿಲುಬೆಯ ವಿಮೋಚನೆಯ ಬಲವು ಪರಿಣಾಮ ಬೀರಲಿ ಎಂಬುದಾಗಿ ನಾವು ನಂಬಬೇಕು.

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org